# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಮೇ 01, 2021

ಸಂಪುಟ : 47 ಸಂಚಿಕೆ : 361 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ಕೋವಿಡ್ ಲಸಿಕಾ ಕೇಂದ್ರದಲ್ಲಿನ ಅವ್ಯವಸ್ಥೆಗೆ ಸಾರ್ವಜನಿಕರ ಆಕ್ರೋಶ

ದಾವಣಗೆರೆ, ಏ.30- ನಗರದ ಮೋತಿ ವೀರಪ್ಪ ಕಾಲೇಜು ಆವರಣದಲ್ಲಿನ ಕೋವಿಡ್ ಲಸಿಕಾ ಕೇಂದ್ರದಲ್ಲಿನ ಅವ್ಯವಸ್ಥೆಗೆ ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಳೆದ ಎರಡು ದಿನಗಳಿಂದ ಲಸಿಕೆ ಸಿಗುತ್ತದೆಂದು ಸಾರ್ವಜನಿಕರು ಮೋತಿ ವೀರಪ್ಪ ಕಾಲೇಜು ಲಸಿಕಾ ಕೇಂದ್ರಕ್ಕೆ ಅಲೆದಾಡುತ್ತಿದ್ದರು. ಗುರುವಾರ ರಾತ್ರಿ ನಗರಕ್ಕೆ ಲಸಿಕೆ ಬಂದಿದ್ದರಿಂದ ಶುಕ್ರವಾರ ಬೆಳಿಗ್ಗೆ ಲಸಿಕೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿತ್ತು.

ಆದರೆ ಸರದಿ ಸಾಲಿನಲ್ಲಿ ನಿಂತಿದ್ದವರನ್ನು ಬಿಟ್ಟು 'ಫ್ರಂಟ್ ಲೈನ್ ವರ್ಕರ್ಸ್ ' ನೆಪ ಹೇಳುತ್ತಾ ಅಲ್ಲಿನ ಸಿಬ್ಬಂದಿ ತಮಗೆ ಬೇಕಾದವರಿಗೆ ಲಸಿಕೆ ನೀಡುತ್ತಿದ್ದಾರೆ ಎಂದು ಸರದಿಯಲ್ಲಿ ನಿಂತಿದ್ದವರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರು ಮಧ್ಯಪ್ರವೇಶಿಸಿ ಸಾರ್ವಜನಿಕರ ಮನವೊಲಿಸಬೇಕಾಯಿತು.

ಕಳೆದ ಎರಡು ದಿನಗಳಿಂದ ಲಸಿಕೆಗಾಗಿ ಬಂದು ಹೋಗುತ್ತಿದ್ದೆವು. ಇಂದು ಲಸಿಕೆ ನೀಡುವುದಾಗಿ ತಿಳಿದು ಬೆಳಿಗ್ಗೆಯಿಂದ ಸರದಿ ಸಾಲಿನಲ್ಲಿ ನಿಂತಿದ್ದೇವೆ. ನಮ್ಮನ್ನು ಕಡೆಗಣಿಸಿ ವೈದ್ಯರು, ಮೆಡಿಕಲ್ ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳಿಗೆ ಲಸಿಕೆ ನೀಡಲಾಗುತ್ತಿದೆ (2ನೇ ಪುಟಕ್ಕೆ)

**ಮಾಹಿತಿ ನೀಡದ ಜಿಲ್ಲಾಡಳಿತ, ಸಾರ್ವಜನಿಕ ಲಸಿಕಾ ಕೇಂದ್ರದಲ್ಲಿ ವಾರಿಯರ್ಸ್‌ಗೆ ಲಸಿಕೆ: ಅಸಮಾಧಾನ**



ಮೋತಿ ವೀರಪ್ಪ ಕಾಲೇಜು ಆವರಣದಲ್ಲಿ ಲಸಿಕೆಗಾಗಿ ಸರದಿ ಸಾಲು

### 2ನೇ ಡೋಸ್‌ಗೆ ಪ್ರತ್ಯೇಕ ವ್ಯವಸ್ಥೆಗೆ ಆಗ್ರಹ

ಮೋತಿ ವೀರಪ್ಪ ಕಾಲೇಜು ಆವರಣದಲ್ಲಿ 1 ಹಾಗೂ 2ನೇ ಡೋಸ್ ಲಸಿಕೆಯನ್ನು ಒಂದೇ ಸ್ಥಳದಲ್ಲಿ ನೀಡುತ್ತಿರುವುದೂ ಸಹ ಗೊಂದಲಕ್ಕೆ ಕಾರಣವಾಗಿದೆ. ಮೊದಲ ಬಾರಿಗೆ ಲಸಿಕೆ ಪಡೆಯಬೇಕಾದವರ ಜೊತೆಯಲ್ಲಿಯೇ ಎರಡನೇ ಡೋಸ್ ಲಸಿಕೆ ಪಡೆಯುವವರೂ ಸರದಿಯಲ್ಲಿ ನಿಲ್ಲುತ್ತಿದ್ದಾರೆ. ಇದರಿಂದ ಸರದಿ ಸಾಲಿನ ಉದ್ದ ಹೆಚ್ಚುತ್ತಿದೆ. ಎರಡನೇ ಡೋಸ್ ಲಸಿಕೆಯನ್ನು ಬೇರೆ ಕಡೆ ನೀಡಬೇಕು ಎಂಬುದು ಹಲವರ ಒತ್ತಾಯವಾಗಿದೆ.

**ಕಳೆದ ಮಾರ್ಚ್ 26 ರಂದು ನಾವು ಕೋವ್ಯಾಕ್ಸಿನ್ ಮೊದಲ ಡೋಸ್ ಲಸಿಕೆ ಪಡೆದಿದ್ದೆವು. ಆದರೆ ಇದುವರೆಗೆ ಎರಡನೇ ಡೋಸ್ ಲಸಿಕೆ ಲಭ್ಯವಾಗಿಲ್ಲ. ಕೋವಿಶೀಲ್ಡ್ ಮೊದಲ ಹಂತದ ಲಸಿಕೆ ಪಡೆದವರೂ ಈಗಾಗಲೇ ಎರಡನೇ ಡೋಸ್ ಪಡೆಯಲು ಸರದಿಗೆ ನಿಲ್ಲುತ್ತಿದ್ದಾರೆ. ಜಿಲ್ಲಾಡಳಿತವು ಮೊದಲ ಡೋಸ್ ಪಡೆಯುವವರಿಗೆ ಆದ್ಯತೆ ನೀಡಬೇಕು. ಎರಡನೇ ಡೋಸ್ ನೀಡಲು ಬೇರೆಡೆ ವ್ಯವಸ್ಥೆ ಮಾಡಬೇಕು.**

- ಎಂ.ಜಿ. ಶ್ರೀಕಾಂತ್, ಸಾಮಾಜಿಕ ಕಾರ್ಯಕರ್ತ.

## ಇಂದಿನಿಂದ ಲಸಿಕೆ ಇಲ್ಲ

ದಾವಣಗೆರೆ, ಏ.30- ಕೋವಿಡ್ ಲಸಿಕೆ ಕೊರತೆ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಮೇ 1ರಿಂದ ಲಸಿಕೆ ಲಭ್ಯವಾಗುವವರೆಗೆ ಲಸಿಕಾ ಕೇಂದ್ರಗಳಲ್ಲಿ ಲಸಿಕೆ ನೀಡಿಕೆ ಇರುವುದಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಲಸಿಕೆ ಲಭ್ಯವಿರುವ ಕಡೆ ಲಸಿಕಾಕರಣ ನಡೆಯಲಿದೆ, ಹೊನ್ನಾಳಿ ಮತ್ತು ಜಗಳೂರು ತಾಲೂಕಿನಲ್ಲಿ ಅಲ್ಪ ಪ್ರಮಾಣದ ಲಸಿಕೆ ಲಭ್ಯವಿದ್ದು ಲಸಿಕೆ ಮುಗಿಯುವವರೆಗೆ ಲಸಿಕೆ ನೀಡಲಾಗುವುದು ಎಂದರು.

ಲಸಿಕೆ ಪೂರೈಕೆಯಾದ ನಂತರ ನಗರ ಪ್ರದೇಶದ 45 ವರ್ಷ ಮೇಲ್ಪಟ್ಟವರು ಆನ್ ಲೈನ್ ನಲ್ಲಿ ರಿಜಿಸ್ಟರ್ ಮಾಡಿಕೊಂಡು ಲಸಿಕೆ ಪಡೆಯಲು ಆಗಮಿಸಬೇಕು. ರಿಜಿಸ್ಟರ್ ಮಾಡಿಕೊಂಡವರು ಗುರುತಿನ ಪತ್ರ ಹಾಗೂ ಆನ್ ಲೈನ್ ನಲ್ಲಿ ರಿಜಿಸ್ಟರ್ ಮಾಡಿಕೊಂಡ ಮೊಬೈಲ್ ಸ್ಕ್ರೀನ್ ಶಾಟ್ ಫೋಟೋ ತರಬೇಕು ಎಂದವರು ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ 6 ಸಾವು 438 ಪಾಸಿಟಿವ್

ದಾವಣಗೆರೆ, ಮೇ 30- ಜಿಲ್ಲೆಯಲ್ಲಿ ಶುಕ್ರವಾರ 438 ಜನರಲ್ಲಿ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದ್ದು, 6 ಜನರು ಮೃತಪಟ್ಟಿದ್ದಾರೆ. ಸಕ್ರಿಯ ಸೋಂಕಿತರ ಸಂಖ್ಯೆ 1920ಕ್ಕೆ ಹಾಗೂ ಮೃತಪಟ್ಟವರ ಸಂಖ್ಯೆ 277ಕ್ಕೆ ಏರಿಕೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 294, ಹರಿಹರ 44, ಜಗಳೂರು 16, ಚನ್ನಗಿರಿ 25, ಹೊನ್ನಾಳಿ 36 ಹಾಗೂ ಹೊರ ಜಿಲ್ಲೆಯ 23 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. 150 ಜನರು ಗುಣಮುಖರಾಗಿದ್ದು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ದಾವಣಗೆರೆ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಲೋಕಿಕೆರೆ ಗ್ರಾಮದ 45 ವರ್ಷದ ಮಹಿಳೆ, (3ನೇ ಪುಟಕ್ಕೆ)

## ಮೋಟಾರು ವಾಹನ ತೆರಿಗೆ: ಅವಧಿ ವಿಸ್ತರಣೆ

ಬೆಂಗಳೂರು, ಏ. 30 – ಕೊರೊನಾ ಎರಡನೇ ಅಲೆ ಹಿನ್ನೆಲೆಯಲ್ಲಿ ಕರ್ನಾಟಕ ಮೋಟಾರು ವಾಹನ ತೆರಿಗೆ ಪಾವತಿ ದಿನಾಂಕವನ್ನು ವಿಸ್ತರಿಸಿದೆ. ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ಕಾಯ್ದೆ 1957ರ ಕಲಂ 4(1) ನಿಯಮಗಳನ್ನು ಸಡಿಲಗೊಳಿಸಿ ಕರ್ನಾಟಕ ರಾಜ್ಯದ ಎಲ್ಲಾ ನೋಂದಾಯಿತ ಸಾರಿಗೆ ಪ್ರಯಾಣಿಕ ವಾಹನಗಳಿಗೆ (ಹೊಸ ವಾಹನಗಳ ನೋಂದಣಿಯನ್ನು ಹೊರತುಪಡಿಸಿ) ಅನ್ವಯಿಸುವಂತೆ ಸರ್ಕಾರದ ಅಧಿಸೂಚನೆ ಹೊರಡಿಸಿದೆ (3ನೇ ಪುಟಕ್ಕೆ)

## ಕೇಂದ್ರ ಸಚಿವರು ಜನರ ಸಂಪರ್ಕದಲ್ಲಿರಬೇಕು

ನವದೆಹಲಿ, ಏ. 30 – ಕೇಂದ್ರ ಸಚಿವರು ಜನರ ಸಂಪರ್ಕದಲ್ಲಿರಬೇಕು ಹಾಗೂ ಅವರಿಂದ ಪರಿಸ್ಥಿತಿಯ ಕುರಿತು ವಿವರ ಪಡೆಯುತ್ತಿರಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಮಂತ್ರಿಮಂಡಲದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಪ್ರಧಾನಿ, ಸ್ಥಳೀಯ ವಿಷಯಗಳನ್ನು ಗುರುತಿಸಿ ಅವುಗಳನ್ನು ಬಗೆಹರಿಸಬೇಕು ಎಂದು ತಿಳಿಸಿದ್ದಾರೆ ಎಂದು ಅಧಿಕೃತ ಹೇಳಿಕೆಯಲ್ಲಿ (3ನೇ ಪುಟಕ್ಕೆ)

# ಬಿಜೆಪಿಗೆ ಎಚ್ಚರಿಕೆ ಡೋಸ್

## ನಗರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 7 ಸ್ಥಾನ ಜೆಡಿಎಸ್‌ಗೆ ಎರಡು ಹಾಗೂ ಬಿಜೆಪಿಗೆ ಒಂದು ಕಡೆ ಗೆಲುವು

ಬೆಂಗಳೂರು, ಏ. 30 - ಬಳ್ಳಾರಿ ಮಹಾನಗರ ಪಾಲಿಕೆ ಸೇರಿದಂತೆ, ರಾಜ್ಯದ ಹತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಕಾಂಗ್ರೆಸ್ ಏಳು ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಜೆಡಿಎಸ್ ಎರಡರಲ್ಲಿ ಗೆಲುವು ಸಾಧಿಸಿದೆ. ಬಿಜೆಪಿ ಕೇವಲ ಒಂದು ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.

ಶೇಕಡವಾರು ಮತದಾನದಲ್ಲೂ ಕಾಂಗ್ರೆಸ್ ಶೇ. 41 ರಷ್ಟು ಮತ ಗಳಿಸಿದ್ದರೆ, ಜೆಡಿಎಸ್ 25 ರಷ್ಟು ಮತ ಪಡೆದಿದೆ. ಬಿಜೆಪಿಗೆ ಕೇವಲ 21 ರಷ್ಟು ಮತ ಲಭ್ಯವಾಗಿದೆ.

ಕಳೆದ ಎರಡು, ಮೂರು ದಶಕಗಳಿಂದ ಬಿಜೆಪಿಯ ಹಿಡಿತದಲ್ಲಿದ್ದ ನಗರಸಭೆಗಳು ಕಾಂಗ್ರೆಸ್ ವಶಕ್ಕೆ ಹೋಗಿವೆ.

ಬಳ್ಳಾರಿ ನಗರ ಪಾಲಿಕೆ, ಬೀದರ್, ರಾಮನಗರ, ಭದ್ರಾವತಿ, ಬೇಲೂರು, ತೀರ್ಥಹಳ್ಳಿ ಹಾಗೂ ಗುಡಿಬಂಡೆ ಸಂಸ್ಥೆಗಳು ಕಾಂಗ್ರೆಸ್ ತೆಕ್ಕೆಗೆ ಬಂದಿವೆ. ಚನ್ನಪಟ್ಟಣ ಹಾಗೂ ವಿಜಯಪುರ ಸ್ಥಳೀಯ ಸಂಸ್ಥೆಗಳು ಜೆಡಿಎಸ್‌ಗೆ ದೊರೆತಿವೆ.

**ಕೊರೊನಾ ಹತ್ತಿಕ್ಕಲು ವಿಫಲಗೊಂಡ ಆಡಳಿತಾರೂಢ ಬಿಜೆಪಿಗೆ ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಮತದಾರರು ಎಚ್ಚರಿಕೆ ಗಂಟೆ ಭಾರಿಸಿದ್ದಾರೆ.**

ಮಡಿಕೇರಿ ನಗರಸಭೆ ಮಾತ್ರ ಬಿಜೆಪಿ ತೆಕ್ಕೆಗೆ ಬಿದ್ದಿದೆ.

ರಾಜ್ಯದಲ್ಲಿ ನಡೆದಿರುವ ಒಂದು ಲೋಕಸಭಾ ಹಾಗೂ ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲೂ ಇದೇ ಫಲಿತಾಂಶದ ನಿರೀಕ್ಷೆಯಲ್ಲಿ ಕಾಂಗ್ರೆಸ್ ಇದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಅವರ ಸಂಪುಟದ ಘಟಾನುಘಟಿಗಳ ಪ್ರತಿನಿಧಿಸುವ ಜಿಲ್ಲೆಗಳಲ್ಲೇ ಬಿಜೆಪಿ ಭಾರೀ ಮುಖಭಂಗಕ್ಕೆ ಒಳಗಾಗಿದೆ.


ಕೊರೊನಾ ಹತ್ತಿಕ್ಕಲು ಸರ್ಕಾರ ವಿಫಲವಾಗಿದೆ ಎಂಬ ಕೂಗು ಕೇಳಿಬಂದ ಬೆನ್ನಲ್ಲೇ ಈ ಚುನಾವಣೆಗಳು ಜರುಗಿದವು.

ಮೇ 2 ರಂದು ಲೋಕಸಭೆ ಹಾಗೂ ಎರಡು ವಿಧಾನಸಭೆಗೆ ನಡೆದ ಉಪಚುನಾವಣೆ ಫಲಿತಾಂಶ ಪ್ರಕಟಗೊಳ್ಳಲಿದೆ.

ಉಪಚುನಾವಣೆಯಲ್ಲೂ ಪ್ರತಿಪಕ್ಷಗಳು ಮೇಲುಗೈ ಸಾಧಿಸಿದರೆ, ರಾಜ್ಯ ರಾಜಕೀಯದಲ್ಲಿ ಕೆಲವು ಮಹತ್ತರ ಬದಲಾವಣೆಯಾಗುವ ಮುನ್ಸೂಚನೆ ಇದೆ.

ಗೆಲುವಿನ ನಂತರ ಹೇಳಿಕೆ ಬಿಡುಗಡೆ ಮಾಡಿರುವ ಕಾಂಗ್ರೆಸ್, ಒಟ್ಟು 266 ವಾರ್ಡ್‌ಗಳಲ್ಲಿ ಕಾಂಗ್ರೆಸ್ 119ರಲ್ಲಿ ಗೆದ್ದಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಆರೋಗ್ಯ ಸಚಿವರ ಜಿಲ್ಲೆಯಲ್ಲೇ ಬಿಜೆಪಿಗೆ ಗೆಲುವು ದೊರೆತಿಲ್ಲ. ಕರ್ನಾಟಕದ ಮತದಾರರು ಜನ ವಿರೋಧಿ ಬಿಜೆಪಿಗೆ ತಕ್ಕ ಉತ್ತರ ಕೊಟ್ಟಿದ್ದಾರೆ ಎಂದು ಹೇಳಿದೆ.

ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಹೇಳಿಕೆ ನೀಡಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ಹಣದ ಅಬ್ಬರದ ನಡುವೆಯೂ ಪಕ್ಷದ ಕೈ ಹಿಡಿದ ಜನತೆ ಗೌರವಯುತ ತೀರ್ಪು ನೀಡಿರುವುದನ್ನು ಗೌರವಿಸುತ್ತೇನೆ ಎಂದಿದ್ದಾರೆ.



ಚಿತ್ರ: ರಫೀಕ್, ಜನತಾವಾಣಿ

**ಲೈಟ್ ನೈಟ್** ಕೊರೊನಾ ಕರ್ಫ್ಯೂ ಹಿನ್ನೆಲೆಯಲ್ಲಿ ದಾವಣಗೆರೆ ಮುಖ್ಯ ರಸ್ತೆಗಳು ರಾತ್ರಿ ಖಾಲಿಯಾಗಿದ್ದವು. ಬೀದಿ ದೀಪಗಳ ಬೆಳಕಿನೊಂದಿಗೆ ಕಂಗೊಳಿಸುತ್ತಿರುವ ಎ.ವಿ.ಕೆ ರಸ್ತೆಯ ಚಿತ್ರವಿದು.

## ಬಲವಂತದ ಸಾಲ ವಸೂಲಿ ಬೇಡ : ಡಿಸಿ

ದಾವಣಗೆರೆ, ಏ. 30- ಜಿಲ್ಲೆಯಲ್ಲಿ ಹಣಕಾಸು ಸಂಸ್ಥೆಗಳಾದ ಎಬಿಎಫ್‌ಸಿ, ಎಂಎಫ್‌ಐ (ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಮತ್ತು ಇತರೆ) ಪತ್ತಿನ ಸಹಕಾರ ಸಂಘಗಳು, ಚೀಟಿ ಸಂಸ್ಥೆಗಳು, ಲೇವಾದೇವಿ, ಗಿರಿವಿದಾರರು ಮಾನವೀಯತೆ ದೃಷ್ಟಿಯಿಂದ ಮೇ 31ರವರೆಗೆ ಬಲವಂತದ ಸಾಲ ವಸೂಲಾತಿ ಕ್ರಮ ಕೈಗೊಳ್ಳಬಾರದು ಎಂದು ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

## ರಾಜ್ಯದಲ್ಲಿ 48 ಸಾವಿರ ಸೋಂಕಿತರು ಪತ್ತೆ

ಬೆಂಗಳೂರು, ಏ. 30 – ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಒಂದೇ ದಿನದಲ್ಲಿ 48 ಸಾವಿರದ ಹಂತಕ್ಕೆ ತಲುಪಿದ್ದು, ಇದೇ ದಿನ 217 ಜನ ಸಾವನ್ನಪ್ಪಿದ್ದಾರೆ.


## 18 ವರ್ಷ ಮೇಲ್ಪಟ್ಟವರಿಗೆ ಇಂದು ಲಸಿಕೆ ಸಿಗದು

ಬೆಂಗಳೂರು, ಏ. 30 - ರಾಜ್ಯದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ನಾಳೆ ಶನಿವಾರದಿಂದಲೇ ಲಸಿಕೆ ಸಿಗಲಿದೆ ಎಂಬ ನಿರೀಕ್ಷೆ ಹುಸಿಯಾಗಿದೆ. ಲಸಿಕೆ ಉತ್ಪಾದಿಸುವ ಕಂಪನಿಗಳಿಗೆ ರಾಜ್ಯ ಸರ್ಕಾರ ಸೂಕ್ತ ಸಮಯದಲ್ಲಿ ಬೇಡಿಕೆ ಮತ್ತು ಹಣ ಪಾವತಿಸದಿರುವುದರಿಂದ ನಿಗದಿತ ಸಮಯಕ್ಕೆ ಲಸಿಕೆಗಳು ದೊರೆಯುತ್ತಿಲ್ಲ.

18 ರಿಂದ 44 ವಯಸ್ಸಿನವರಿಗೆ ಕೇಂದ್ರ ಸರ್ಕಾರ ಉಚಿತ ಲಸಿಕೆಗಳನ್ನು ಪೂರೈಸುತ್ತಿಲ್ಲ. ಈ ವರ್ಗಕ್ಕೆ ರಾಜ್ಯ ಸರ್ಕಾರವೇ ಉಚಿತ ಲಸಿಕೆ ನೀಡಲಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರಕಟಿಸಿದ್ದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಪಡೆದವರಿಗೆ ಮಾತ್ರ ಉಚಿತ ಲಸಿಕೆ ಎಂದು ಹೇಳಿದ್ದರು. ಆದರೆ ಉಚಿತ ಲಸಿಕೆ ವಿಳಂಬವಾಗಲಿದೆ.

ಇನ್ನು ಲಸಿಕಾ ಕಂಪನಿಗಳು ಲಸಿಕೆಯನ್ನು ನಾಳೆಯಿಂದ ದುಬಾರಿ ದರದಲ್ಲಿ ಮುಕ್ತ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿವೆ. ಖಾಸಗಿ ಆಸ್ಪತ್ರೆಗಳಲ್ಲಿ ನಿಗದಿತ ದರ ಪಾವತಿಸಿ, ಲಸಿಕೆ ಪಡೆದುಕೊಳ್ಳಬಹುದು. 45 ವರ್ಷ ಮೇಲ್ಪಟ್ಟವರಿಗೆ ಕೇಂದ್ರ ಈಗಿನ (2ನೇ ಪುಟಕ್ಕೆ)



**ಲಸಿಕೆ ಬಗ್ಗೆ ಮಾಹಿತಿ ನೀಡುವವರೆಗೆ ಆಸ್ಪತ್ರೆಗೆ ಬರದಂತೆ ಜನತೆಯಲ್ಲಿ ಸಚಿವ ಸುಧಾಕರ ಮನವಿ**

## ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿಗೆ ನೋಂದಣಿ

ದಾವಣಗೆರೆ, ಏ.30- 2021-22 ನೇ ಸಾಲಿನ ರಾಬಿ ಋತುವಿನ ಭತ್ತವನ್ನು 2020-21 ನೇ ಸಾಲಿನ ಮುಂಗಾರು ಋತುವಿನಲ್ಲಿ ಖರೀದಿ ಮಾಡುವ ಸಂಬಂಧ ಸರ್ಕಾರವು 2020-21 ನೇ ಸಾಲಿಗೆ ರೈತರಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತಕ್ಕೆ ದರ ನಿಗದಿಪಡಿಸಿದ್ದು, ಖರೀದಿ ಪ್ರಕ್ರಿಯೆಗೆ ರೈತರ ನೋಂದಣಿ ಆರಂಭವಾಗಿದೆ.

ಭತ್ತ ಸಾಮಾನ್ಯ ಪ್ರತಿ ಕ್ವಿಂಟಾಲ್‌ಗೆ ರೂ.1868 ಮತ್ತು ಭತ್ತ ಗ್ರೇಡ್ 'ಎ' ಗೆ ರೂ.1888 ದರವನ್ನು ಸರ್ಕಾರ ನಿಗದಿಪಡಿಸಿದ್ದು, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರ್ಕಾರವು 2021-22ನೇ ಸಾಲಿನ (3ನೇ ಪುಟಕ್ಕೆ)


**WANTED**

A Renowned Insurance Company Requires Sales Officers to work in its bancassurance channel. The job demands male candidates with atleast 2 years of experience in front line sales preferably in insurance or banking sector.

Age : 25 to 35 years
Qualification : Any Degree
Interested candidates may immediately

CONTACT : 89711 04280



**MANIS DATA LINK**

# 446/1, Lawyer Road, K.B.Extension, Davanagere.

BSNL

ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ (FTTH) ಸೌಲಭ್ಯ ಕಲ್ಪಿಸಲಾಗುವುದು

3300 GB
60 Mbps
Super Speed Inter Net
24 Hrs. Unlimited free Calling on (Local + STD) to Any Network, FTTH Plan
Starting Plan
Rs.599/-
Instalation Free
PH: 08192 295900


# ಪ್ರಾಣವಾಯು ಪೂರೈಸುವ ಸದರನ್

## ಹರಿಹರದ ದಿ ಸದರನ್ ಗ್ಯಾಸ್ ಏಜೆನ್ಸಿಯಿಂದ ಹಲವು ಜಿಲ್ಲೆಗಳಿಗೆ ಆಕ್ಸಿಜನ್

ಎಂ. ಚಿದಾನಂದ ಕಂಚಿಕೇರಿ

ಹರಿಹರ, ಏ.30- ಕೊರೊನಾ ರೋಗಿಗಳಿಗೆ ಅಗತ್ಯವಿರುವ ಆಕ್ಸಿಜನ್ ಪೂರೈಕೆಗಾಗಿ ಹರಪನಹಳ್ಳಿ ರಸ್ತೆಯಲ್ಲಿ ಇರುವ ದಿ. ಸದರನ್ ಗ್ಯಾಸ್ ಏಜೆನ್ಸಿಯಲ್ಲಿ ಆಕ್ಸಿಜನ್ ಅನ್ನು ದಾವಣಗೆರೆ, ಚಿತ್ರದುರ್ಗ ಸೇರಿದಂತೆ ಇತರೆ ನಗರಗಳಿಗೆ ಪೂರೈಸಲು ವ್ಯವಸ್ಥೆ ಆಗುತ್ತಿದೆ.

ನಗರದಲ್ಲಿನ ದಿ ಸದರನ್ ಗ್ಯಾಸ್ ಏಜೆನ್ಸಿ ಕಂಪನಿಯ ಮುಖ್ಯ ಕಚೇರಿ ಗೋವಾ ನಗರದಲ್ಲಿ, ಇದ್ದು ಈ ಏಜೆನ್ಸಿ ಷೇರುದಾರರ ಸಹಭಾಗಿತ್ವದಲ್ಲಿ ತನ್ನ ಸೇವೆಯನ್ನು ಒದಗಿಸುತ್ತಿದೆ.



ಇಲ್ಲಿಯ ದಿ. ಸದರನ್ ಗ್ಯಾಸ್ ಏಜೆನ್ಸಿಯಿಂದ ದಾವಣಗೆರೆ ನಗರದ ಸಿಜಿ ಆಸ್ಪತ್ರೆ, ಬಾಪೂಜಿ ಆಸ್ಪತ್ರೆ, ಹೈಟೆಕ್ ಆಸ್ಪತ್ರೆ, ಚಿತ್ರದುರ್ಗ ಸರ್ಕಾರಿ ಆಸ್ಪತ್ರೆ, ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು, ಬಸವೇಶ್ವರ ಆಸ್ಪತ್ರೆ ಮತ್ತು ದಾವಣಗೆರೆ ಎಂಎಸ್‌ಪಿಎಲ್ ಏಜೆನ್ಸಿ ಮೂಲಕ ಹಲವಾರು ಸಣ್ಣ ಹಾಗೂ ದೊಡ್ಡ ಆಸ್ಪತ್ರೆಗಳಿಗೆ, ಹರಪನಹಳ್ಳಿ, ಹೂವಿನಹಡಗಲಿ, ಮಲೇಬೆನ್ನೂರು, ಹೊನ್ನಾಳಿ, ರಾಣೇಬೆನ್ನೂರು ನಗರದ ಸಾರ್ವಜನಿಕ ಆಸ್ಪತ್ರೆಗಳಿಗೆ ಇಲ್ಲಿಂದ ಮೆಡಿಕಲ್ ಆಕ್ಸಿಜನ್ ಸ ರ ಬ ರಾ ಜು (2ನೇ ಪುಟಕ್ಕೆ)


**ಪಿ. ವಿಶ್ವೇಶ್ವರರಾವ್ ನಿಧನ**



ದಾವಣಗೆರೆ ಕೆ.ಬಿ. ಬಡಾವಣೆ ವಾಸಿ
**ಪಿ. ವಿಶ್ವೇಶ್ವರರಾವ್ ಇವರು**
ದಿನಾಂಕ : 30.04.2021ನೇ ಶುಕ್ರವಾರ ಬೆಳಿಗ್ಗೆ 5.45ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರು ಪತ್ನಿ, ಮಗ, ಮಗಳು, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಇಂತಿ ದುಃಖತಪ್ತ ಕುಟುಂಬ ವರ್ಗ :
98862 52456, 98863 83078



**ಹಾರ್ದಿಕ ಸುಸ್ವಾಗತ**



ದಾವಣಗೆರೆ ತಾಲ್ಲೂಕು ಜರೇಕಟ್ಟೆ ವಾಸಿಯಾದ
**ಶ್ರೀಯುತ ಎನ್.ಕೆ. ರವಿಕುಮಾರ್**
**ಸುಬೇದಾರ್ ಮೇಜರ್** ಇವರು ಭಾರತೀಯ ಸೇನೆಯಲ್ಲಿ 25 ವರ್ಷಗಳ ಕಾಲ ದೀರ್ಘ ಸೇವೆ ಸಲ್ಲಿಸಿ, ಲಡಾಕ್ ಗಡಿಯಿಂದ ನಿವೃತ್ತಿ ಹೊಂದಿ ಇಂದು ಸ್ವಗ್ರಾಮಕ್ಕೆ ಆಗಮಿಸುತ್ತಿದ್ದಾರೆ.
ಇವರಿಗೆ ನಮ್ಮೆಲ್ಲರ ಹಾರ್ದಿಕ ಸುಸ್ವಾಗತ
**ಜರೇಕಟ್ಟೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**

# ಸಂಶಯಾತ್ಮಕ ವ್ಯಕ್ತಿಗಳು ಕಂಡುಬಂದರೆ 112 ಕ್ಕೆ ಕರೆ ಮಾಡಿ

## ಜಗಳೂರಿನಲ್ಲಿ ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ್



ಜಗಳೂರು, ಏ.30- ಅಪರಾಧ ತಡೆಗಾಗಿ ಕರ್ನಾಟಕ ಸರ್ಕಾರ ನೂತನವಾಗಿ ಇಆರ್‌ಎಸ್‌ಎಸ್ ವಿಶೇಷ ಯೋಜನೆ ಜಾರಿಗೊಳಿಸಿದ್ದು, ಸಂಶಯಾತ್ಮಕ ವ್ಯಕ್ತಿಗಳು ಕಂಡುಬಂದಲ್ಲಿ 112 ನಂಬರ್‌ಗೆ ಕರೆ ಮಾಡಿ ಎಂದು ದಾವಣಗೆರೆ ಗ್ರಾಮಾಂತರ ಉಪವಿಭಾಗದ ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ್ ತಿಳಿಸಿದರು.

ಪಟ್ಟಣದ ಇಂದಿರಾ ಬಡಾವಣೆಯ ದುರ್ಗಾಂಭಿಕಾ ದೇವಸ್ಥಾನ ಮುಂಭಾಗದ ಕಾಲೋನಿಯ ನಿವಾಸಿಗಳಿಗೆ ಕೊರೊನ ಹಾಗೂ ಅಪರಾಧ ತಡೆ ಮಾಸಾಚರಣೆ ಕುರಿತು ಜಾಗೃತಿ ಮೂಡಿಸಿ ಮಾಸ್ಕ್ ಮತ್ತು ಸ್ಯಾನಿಟೈಸರ್ ವಿತರಿಸಿ ಮಾತನಾಡಿ, ಕೊರೊನಾ ಬಗ್ಗೆ ಭಯ ಬೇಡ ಜಾಗೃತಿ ವಹಿಸಿರಿ. ಶಕ್ತಿವರ್ಧಕ ಆಹಾರ ಪದಾರ್ಥಗಳನ್ನು ಸೇವಿಸಿ ಯೋಗಾಭ್ಯಾಸ ನಡೆಸಿದರೆ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.


ಈ ಬಾರಿ ಕೋವಿಡ್ ಎರಡನೇ ಅಲೆ ಸೋಂಕು ಅತಿ ವೇಗದಲ್ಲಿ ಪಸರಿಸುತ್ತಿದ್ದು, ಅರಿತುಕೊಂಡು ಕಡ್ಡಾಯವಾಗಿ ಮಾಸ್ಕ್, ಸ್ಯಾನಿಟೈಸರ್ ಬಳಕೆ ಮಾಡಿ ಲಾಕ್‌ಡೌನ್ ನಿಯಮ ಪಾಲಿಸುವ ಮೂಲಕ ಪೊಲೀಸ್ ಇಲಾಖೆಯವರಿಗೆ ಸಹಕರಿಸಬೇಕು ಎಂದು ಹೇಳಿದರು.

ಇಆರ್‌ಎಸ್‌ಎಸ್ ವಾಹನ ವಿಶೇಷವಾಗಿ ಬೀಟ್‌ಗೆ ನಿಯೋಜಿಸಲಾಗಿದ್ದು, ನಿರಂತರ ಸೇವೆಯಲ್ಲಿ ಪೊಲೀಸ್ ಸಿಬ್ಬಂದಿಗಳು ನಿರತರಾಗಿರುತ್ತಾರೆ. ಪಟ್ಟಣದಲ್ಲಿ ಒಂಟಿ ಮನೆಗಳಿಗೆ ಅಥವಾ ಮನೆಯಲ್ಲಿ ಯಾರೂ ಇರದ ವೇಳೆ ದಿಢೀರ್ ಕಳ್ಳರು ಆಕ್ರಮಿಸಿದರೆ 112 ಸಹಾಯವಾಣಿಗೆ ಕರೆ ಮಾಡಿ ತಿಳಿಸಬೇಕು ಎಂದು ತಿಳಿಸಿದರು.

ಸಿಪಿಐ ಮಂಜುನಾಥ್ ಪಂಡಿತ್ ಮಾತನಾಡಿ, ಕೊರೊನಾ ಬಗ್ಗೆ ಪ್ರತಿಯೊಬ್ಬರೂ ಜಾಗೃತರಾಗಿರಿ. ಪೊಲೀಸ್ ಇಲಾಖೆಯಿಂದ ಮಾಸ್ಕ್ ವಿತರಿಸಿ ಜಾಗೃತಿ ಮೂಡಿಸಲಾಗಿದೆ. ಬೆಳಿಗ್ಗೆ 6 ರಿಂದ 10 ರವರೆಗೆ ಅಗತ್ಯ ವಸ್ತುಗಳನ್ನು ಖರೀದಿಸಿ ನಂತರ ಮನೆಗಳಲ್ಲಿದ್ದು ಲಾಕ್‌ಡೌನ್‌ಗೆ ಕೈಜೋಡಿಸಬೇಕು.

ಅನಾವಶ್ಯಕವಾಗಿ ತಿರುಗಾಡಿದರೆ ದಂಡ ಖಚಿತ ಎಂದು ಎಚ್ಚರಿಸಿದರು. ಪಿಎಸ್‌ಐ ಸಂತೋಷ್ ಭಾಗೋಜಿ, ಪೊಲೀಸ್ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಕೋವಿಡ್ ನಿಯಂತ್ರಣಕ್ಕೆ ಸಮಿತಿ ರಚನೆ



## ಹರಪನಹಳ್ಳಿ

ಹರಪನಹಳ್ಳಿ, ಏ.30- ಕೋವಿಡ್ ನಿಯಂತ್ರಣಕ್ಕೆ ಗ್ರಾಮೀಣ ಭಾಗದಲ್ಲಿ ರಚನೆ ಮಾಡಿರುವ ಟಾಸ್ಕ್‌ಫೋರ್ಸ್ ಸಮಿತಿಗಳಂತೆ ಪಟ್ಟಣದಲ್ಲೂ ವಾರ್ಡ್‌ವಾರು ಸಮಿತಿಗಳನ್ನು ರಚನೆ ಮಾಡಬೇಕು ಎಂದು ತಹಶೀಲ್ದಾರ ಎಲ್. ಎಂ. ನಂದೀಶ್ ಹೇಳಿದರು.

ಪಟ್ಟಣದ ಪುರಸಭೆಯಲ್ಲಿ ಅಧ್ಯಕ್ಷ ಮಂಜುನಾಥ ಇಜಂತಕರ್ ಅವರ ಅಧ್ಯಕ್ಷತೆಯಲ್ಲಿ ಕೋವಿಡ್ ನಿಯಂತ್ರಣಕ್ಕೆ ವಾರ್ಡ್‌ವಾರು ಟಾಸ್ಕ್ ಫೋರ್ಸ್ ಸಮಿತಿಗಳನ್ನು ರಚಿಸಲು ನಿರ್ಣಯ ಕೈಗೊಂಡ ನಂತರ ಮಾತನಾಡಿ, ಆಯಾ ವಾರ್ಡ್‌ಗಳ ಸದಸ್ಯರೇ ಆಯಾ ವಾರ್ಡ್‌ಗಳ ಸಮಿತಿಗಳ ಅಧ್ಯಕ್ಷರಾಗಿರುತ್ತಾರೆ. ಅಂಗನವಾಡಿ ಕಾರ್ಯಕರ್ತರು, ಬೀಟ್ ಪೊಲೀಸರು, ಸಮಾಜಸೇವಕರು, ಎಎನ್‌ಎಂ ಹೀಗೆ ಸಮಿತಿ ಸದಸ್ಯರುಗಳು ಇರುತ್ತಾರೆ ಎಂದರು.

ಪುರಸಭಾ ಸದಸ್ಯ ಕಿರಣ್ ಶಾನ್‌ಭಾಗ್ ಕೊರೊನಾ ಸೋಂಕಿತರ ಬಗ್ಗೆ ಆಯಾ ವಾರ್ಡ್ ಸದಸ್ಯರಿಗೆ ಮಾಹಿತಿ ನೀಡಬೇಕು ಎಂದು ಕೋರಿದರು. ಮತ್ತೊಬ್ಬ ಸದಸ್ಯ ಜಾಕೀರ್ ಹುಸೇನ್ ಮಾತನಾಡಿ, 14 ದಿನ ಕ್ವಾರಂಟೈನ್ ಆದವರಿಗೆ ಸರ್ಕಾರದಿಂದ ಆಹಾರ ಒದಗಿಸಬೇಕು ಎಂದು ಕೋರಿದರು. ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಜಂಗಲಿ ಅಂಜಿನಪ್ಪ ಜನತಾ ಕರ್ಫ್ಯೂ ಮುಗಿಯುವವರೆಗೂ ಬೀದಿ ಬದಿ ವ್ಯಾಪಾರಿಗಳ ಬಳಿ ಜಕಾತಿ ವಸೂಲಿ ಮಾಡಬಾರದು ಎಂದು ಮನವಿ ಮಾಡಿದರು.

ಪುರಸಭಾ ಉಪಾಧ್ಯಕ್ಷೆ ನಿಟ್ಟೂರು ಭೀಮವ್ವ, ಸದಸ್ಯರುಗಳಾದ ಭರತೇಶ, ಮಂಜುನಾಥ, ವಾಗೀಶ, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ, ಸಮುದಾಯ ಸಂಘಟನೆ ಅಧಿಕಾರಿ ಲೋಕನಾಯ್ಕ, ಇಂಜಿನಿಯರ್ ಸಿದ್ದೇಶ, ಕಂದಾಯ ಅಧಿಕಾರಿ ಸೇರಿದಂತೆ, ಇನ್ನಿತರರು ಪಾಲ್ಗೊಂಡಿದ್ದರು.

# ರಶೀದಿ ಕೇಳಿದ್ದಕ್ಕೆ ಥಳಿಸಿದ ಪೊಲೀಸರು



## ಮಾಜಿ ಸೈನಿಕನ ಆರೋಪ

ದಾವಣಗೆರೆ, ಏ.30- ಮಾಸ್ಕ್ ಧರಿಸದ ಕಾರಣ ದಂಡ ಕಟ್ಟಿ ರಶೀದಿ ಕೇಳಿದ್ದಕ್ಕೆ ಕೊಡದೇ ಮಾಜಿ ಸೈನಿಕರೋರ್ವರಿಗೆ ಇಲ್ಲಿನ ಗ್ರಾಮಾಂತರ ಪೊಲೀಸರು ಮನಬಂದಂತೆ ಥಳಿಸಿರುವ ಬಗ್ಗೆ ಆರೋಪಿಸಲಾಗಿದೆ.

ಮಾಜಿ ಸೈನಿಕ ಬಿ.ಎಸ್. ವೀರಪ್ಪ ಅವರು ಇದೇ ಇದೇ ದಿನಾಂಕ 26ರಂದು ರಾತ್ರಿ ದ್ವಿಚಕ್ರ ವಾಹನದಲ್ಲಿ ಆನಗೋಡಿಗೆ ಹೋಗುತ್ತಿದ್ದರು. ಮಾಸ್ಕ್ ಧರಿಸದ ಹಿನ್ನೆಲೆಯಲ್ಲಿ ಗಸ್ತಿನಲ್ಲಿದ್ದ ಆನಗೋಡು ಬಳಿ ಗ್ರಾಮಾಂತರ ಪೊಲೀಸರು ವಾಹನ ತಡೆದರು. ಮಾಸ್ಕ್ ಧರಿಸದ್ದಕ್ಕೆ 250 ರೂ. ದಂಡ ವಿಧಿಸಿದರು. ಹಣವನ್ನು ಕೊಟ್ಟಿದ್ದಕ್ಕೆ ರಶೀದಿ ಯಾಕೆ ನೀಡಲ್ಲ ಎಂದು ವಾದಿಸಿದ್ದಕ್ಕೆ ನಾನೊಬ್ಬ ಮಾಜಿ ಸೈನಿಕ ಎಂದು ಹೇಳಿದರೂ ಬಲ ಭುಜದ ಮೂಳೆ, ಪಾದಗಳ ಮೂಳೆಗಳು ಮುರಿಯುವಂತೆ ಹೊಡೆದಿದ್ದಾರೆ ಎಂದು ವೀರಪ್ಪ ಆರೋಪಿಸಿದ್ದಾರೆ.

**ಮಾಜಿ ಸೈನಿಕರ ಸಂಘ ಆಕ್ರೋಶ:** ಭಾರತೀಯ ಸೇನೆಯಲ್ಲಿ 22 ವರ್ಷ ಸೇವೆ ಸಲ್ಲಿಸಿದ್ದ ಮಾಜಿ ಸೈನಿಕ ಬಿ.ಎಸ್. ವೀರಪ್ಪನವರ ಮೇಲೆ ಪೊಲೀಸರು ಅಮಾನವೀಯವಾಗಿ ಹಲ್ಲೆ ಮಾಡಿ, ದೌರ್ಜನ್ಯ ಎಸಗಿರುವುದು ಸರಿಯಲ್ಲ. ಈ ಬಗ್ಗೆ ಉನ್ನತ ತನಿಖೆಗೆ ಒತ್ತಾಯಿಸಿ, ಹೋರಾಟ ಮುಂದುವರಿಯಲಿದೆ ಎಂದು ಜಿಲ್ಲಾ ಮಾಜಿ ಸೈನಿಕ ವಿವಿಧೋದ್ದೇಶ ಸಂಘದ ಅಧ್ಯಕ್ಷ ಎಂ.ಎನ್. ಸತ್ಯಪ್ರಕಾಶ್, ಉಪಾಧ್ಯಕ್ಷ ಎಂ.ಎಸ್. ಮಹೇಂದ್ರಕರ್, ಕಾರ್ಯದರ್ಶಿ ಓ.ಬಿ. ಶಶಿಕಾಂತ್, ಖಜಾಂಚಿ ಎಂ. ದಾಸಪ್ಪ ಇತರರು ಎಚ್ಚರಿಸಿದ್ದಾರೆ.

# 23 ವಾರ್ಡ್‌ಗಳಿಗೆ ಮೀಸಲಾತಿ ನಿಗದಿ

## ಮಲೇಬೆನ್ನೂರು ಪುರಸಭೆ

ಮಲೇಬೆನ್ನೂರು, ಏ.30 - ಇಲ್ಲಿನ ಪುರಸಭೆಯ ಈಗಿರುವ ಸದಸ್ಯರ ಅವಧಿ ಮೇ 24ಕ್ಕೆ ಮುಕ್ತಾಯಗೊಳ್ಳಲಿದ್ದು. ಹೊಸ ಸದಸ್ಯರ ಆಯ್ಕೆಗೆ ಚುನಾವಣೆ ನಡೆಸಬೇಕಾಗಿರುವುದರಿಂದ 2011 ರ ಜನಗಣತಿಯನ್ನಾಧರಿಸಿ ಪುರಸಭೆಯ 23 ವಾರ್ಡ್‌ಗಳಿಗೆ ಕರಡು ಮೀಸಲಾತಿಯನ್ನು ನಿಗದಿ ಮಾಡಿ ಸರ್ಕಾರದ ಅಧಿಸೂಚನೆಯಂತೆ ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ ಪ್ರಕಟಿಸಿದ್ದಾರೆ.

ಕರಡು ಮೀಸಲಾತಿಯನ್ನು ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಸಲಾಗಿದ್ದು, ಈ ಅಧಿಸೂಚನೆಯನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಅಂದರೆ ದಿನಾಂಕ 27.04.2021 ರಿಂದ 7 ದಿನಗಳ ತರುವಾಯ ಈ ಅಧಿಸೂಚನೆಯನ್ನು ಪರಿಗಣನೆಗೆ ತೆಗದುಕೊಳ್ಳಲಾಗುವುದು.

ಈ ವಿಷಯಕ್ಕೆ ಸಂಬಂಧಿ ಸಿದಂತೆ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ಅದನ್ನು ಲಿಖಿತ ರೂಪದಲ್ಲಿ ಕಾರಣ ಸಹಿತವಾಗಿ ದಾಖಲೆಗಳೊಂದಿಗೆ ನಿಗದಿತ ದಿನಾಂಕದ ಒಳಗಾಗಿ ಜಿಲ್ಲಾಧಿಕಾರಿಗಳು ದಾವಣಗೆರೆ ಇಲ್ಲಿ ಸಲ್ಲಿಸು ವಂತೆ ಎಡಿಸಿ ಪೂಜಾರ ವೀರಮಲ್ಲಪ್ಪ ತಿಳಿಸಿದ್ದಾರೆ.

**ಮೀಸಲಾತಿ ವಿವರ :** 1ನೇ ವಾರ್ಡ್- ಸಾಮಾನ್ಯ, 2ನೇ ವಾರ್ಡ್ - ಬಿಸಿಎಂ-'ಎ' 3ನೇ ವಾರ್ಡ್ - ಸಾಮಾನ್ಯ, 4ನೇ ವಾರ್ಡ್- ಬಿಸಿಎಂ-'ಬಿ' (ಮಹಿಳೆ), 5ನೇ ವಾರ್ಡ್ - ಸಾಮಾನ್ಯ (ಮಹಿಳೆ), 6ನೇ ವಾರ್ಡ್- ಬಿಸಿಎಂ -'ಎ' 7ನೇ ವಾರ್ಡ್ ಬಿಸಿಎಂ-'ಎ', 8ನೇ ವಾರ್ಡ್ ಬಿಸಿಎಂ - ಎ (ಮಹಿಳೆ) 9 ನೇ ವಾರ್ಡ್ ಬಿಸಿಎಂ - ಎ (ಮಹಿಳೆ), 10ನೇ ವಾರ್ಡ್ - ಎಸ್ಸಿ (ಮಹಿಳೆ), 11 ನೇ ವಾರ್ಡ್ ಸಾಮಾನ್ಯ (ಮಹಿಳೆ), 12ನೇ ವಾರ್ಡ್- ಸಾಮಾನ್ಯ (ಮಹಿಳೆ) 13ನೇ ವಾರ್ಡ್ ಬಿಸಿಎಂ - ಎ (ಮಹಿಳೆ), 14 ನೇ ವಾರ್ಡ್ ಸಾಮಾನ್ಯ (ಮಹಿಳೆ), 15ನೇ ವಾರ್ಡ್ ಬಿಸಿಎಂ - ಎ (ಮಹಿಳೆ), 16ನೇ ವಾರ್ಡ್ ಸಾಮಾನ್ಯ, 17ನೇ ವಾರ್ಡ್ ಸಾಮಾನ್ಯ (ಮಹಿಳೆ), 18ನೇ ವಾರ್ಡ್ - ಬಿಸಿಎಂ - 'ಎ' , 19ನೇ ವಾರ್ಡ್-ಸಾಮಾನ್ಯ (ಮಹಿಳೆ), 20ನೇ ವಾರ್ಡ್- ಸಾಮಾನ್ಯ, 21 ನೇ ವಾರ್ಡ್ ಸಾಮಾನ್ಯ (ಮಹಿಳೆ), 22ನೇ ವಾರ್ಡ್-ಸಾಮಾನ್ಯ, 23ನೇ ವಾರ್ಡ್ ಆಶ್ರಯ ಕಾಲೋನಿ- ಎಸ್ಸಿ.

**ಆಕ್ಷೇಪ:** ಈಗ ಬಿಡುಗಡೆ ಮಾಡಿರುವ ಕರಡು ಮೀಸಲಾತಿ ಸಂಪೂರ್ಣವಾಗಿ ವಾರ್ಡ್‌ನಲ್ಲಿರುವ ವಾಸ್ತವ ಸ್ಥಿತಿ ಅರಿತು ಮೀಸಲಾತಿ ಪ್ರಕಟಿಸಬೇಕೆಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಒತ್ತಾಯಿಸಿದ್ದಾರೆ. ಅಲ್ಲದೇ ಈ ಕುರಿತು ಜಿಲ್ಲಾಧಿಕಾರಿಗಳಿಗೆ ಪತ್ರ ಮುಖೇನ ಆಕ್ಷೇಪಣೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

# ಅವ್ಯವಸ್ಥೆಗೆ ಸಾರ್ವಜನಿಕರ ಆಕ್ರೋಶ

(1ನೇ ಪುಟದಿಂದ) ಎಂದು ಹಿರಿಯ ನಾಗರಿಕರೊಬ್ಬರು ಕಿಡಿಕಾರಿದರು. ಬೆಳಿಗ್ಗೆ 9.30 ರಿಂದ ಮಧ್ಯಾಹ್ನದವರೆಗೆ ಸುಮಾರು 500 ಜನರಿಗೆ ಲಸಿಕೆ ನೀಡಲಾಯಿತು. ಲಸಿಕೆಗಾಗಿ ಬಂದಿದ್ದವರು ಲಸಿಕೆ ಸಿಗದೆ ವಾಪಸ್ ತೆರಳಿದರು. ಪೋಷಕರ ಬದಲಾಗಿ ಮಕ್ಕಳು, ಯುವಕರು ನಿಂತು ಸರದಿಯಲ್ಲಿ ನಿಂತು ನಂತರ ಪೋಷಕರಿಗೆ ಜಾಗ ಮಾಡಿಕೊಡುತ್ತಿದ್ದುದು ಕಂಡು ಬಂತು.

ಎಂ.ಸಿ.ಸಿ. ಎ ಹಾಗೂ ಬಿ ಬ್ಲಾಕ್, ನಿಜಲಿಂಗಪ್ಪ ಬಡಾವಣೆ, ವಿದ್ಯಾನಗರ, ಶಾಮನೂರು, ಪಿ.ಜೆ. ಬಡಾವಣೆ ಮುಂತಾದ ಕಡೆಯಿಂದ 45 ವರ್ಷ ಮೇಲ್ಪಟ್ಟವರು ಲಸಿಕೆ ಪಡೆಯಲು ಆಗಮಿಸಿದ್ದರು. ವಿಕಲಚೇತನರು ಹಾಗೂ 80 ರಿಂದ 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರೂ ಸಹ ಆಗಮಿಸಿದ್ದರು.

ಲಸಿಕಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆಗಮಿಸಿದ್ದಾಗ, ಹಿರಿಯರೊಬ್ಬರು ಶಾಮಿಯಾನ ವ್ಯವಸ್ಥೆ ಮಾಡುವಂತೆ ಮನವಿ ಮಾಡಿದರು. ಕೂಡಲೇ ಡಿಸಿ ಶಾಮಿಯಾನ ಹಾಗೂ ಕುರ್ಚಿಗಳ ವ್ಯವಸ್ಥೆ ಮಾಡಿದರು.

**ಸಮರ್ಪಕ ಮಾಹಿತಿ ನೀಡದ ಜಿಲ್ಲಾಡಳಿತ:** ಲಸಿಕೆ ನೀಡುವ ಸ್ಥಳ, ದಿನಾಂಕ ಹಾಗೂ ಸಮಯವನ್ನು ಜಿಲ್ಲಾಡಳಿತ ಸಾರ್ವಜನಿಕರಿಗೆ ತಿಳಿಸಿದರೆ ಅನುಕೂಲವಾಗುತ್ತದೆ. ಹೀಗೆ ಎರಡು ಮೂರು ದಿನ ಬಿಟ್ಟು ಒಂದು ದಿನ ದಿಢೀರನೆ ಲಸಿಕೆ ಹಾಕಲು ಆರಂಭಿಸಿದರೆ ಹೇಗೆ?. ಜಿಲ್ಲಾಡಳಿತ ಲಸಿಕೆ ನೀಡುವ ಕುರಿತು ಮಾಹಿತಿ ನೀಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಭಾಷಾನಗರ, ಎಸ್.ಎಂ. ಕೃಷ್ಣ ನಗರ, ಭಾರತ್ ಕಾಲೋನಿ, ನಿಟುವಳ್ಳಿ, ಆಜಾದ್ ನಗರ, ಹೆಚ್.ಕೆ.ಆರ್. ನಗರ ಸೇರಿದಂತೆ ನಗರದ ವಿವಿಧ ಭಾಗಗಳಲ್ಲಿ ಲಸಿಕಾ ನೀಡಲಾಗುತ್ತದೆ. ಆದರೆ, ಎಲ್ಲಿ, ಯಾವಾಗ, ಯಾವ ಲಸಿಕೆ ನೀಡುತ್ತಾರೆ ಎಂಬ ಸ್ಪಷ್ಟವಾದ ಮಾಹಿತಿ ಸಿಗುತ್ತಿಲ್ಲ. ಅಲ್ಲದೇ ಈ ಎಲ್ಲಾ ಲಸಿಕೆ ಕೇಂದ್ರಗಳಲ್ಲಿ ಸಾರ್ವಜನಿಕರನ್ನು ಕಡೆಗಣಿಸಿ ತಮಗೆ ಬೇಕಾದವರನ್ನು ಕರೆಯಿಸಿಕೊಂಡು ಲಸಿಕೆ ನೀಡುತ್ತಿದ್ದಾರೆ ಎಂಬ ಬಲವಾದ ಆರೋಪವೂ ಕೇಳಿ ಬರುತ್ತಿದೆ.

# ಎಪಿಎಂಸಿ ಸಮಯ ವಿಸ್ತರಿಸಿ

ದಾವಣಗೆರೆ, ಏ.30- ಎಪಿಎಂಸಿಯ ನಿತ್ಯದ ವಹಿವಾಟಿಗೆ ಲಾಕ್‌ಡೌನ್ ಹಿನ್ನೆಲೆಯಲ್ಲಿ ನಿಗದಿ ಮಾಡಿರುವ ಸಮಯವನ್ನು ಬೆಳಿಗ್ಗೆ 6 ರಿಂದ 10ರ ಬದಲು ಬೆಳಿಗ್ಗೆ 6 ರಿಂದ ಸಂಜೆ 4 ರವರೆಗೆ ಕಾಲಾವಕಾಶ ನೀಡುವಂತೆ ನಗರಸಭಾ ಮಾಜಿ ಅಧ್ಯಕ್ಷ ಎಂ.ಮಂಜುನಾಥ್ ಮನವಿ ಮಾಡಿದ್ದಾರೆ.

# 18 ವರ್ಷ : ಇಂದು ಲಸಿಕೆ ಸಿಗದು

(1ನೇ ಪುಟದಿಂದ) ನಿಯಮಾವಳಿಯಂತೆ ಉಚಿತ ಹಾಗೂ ಕಡಿಮೆ ದರದಲ್ಲಿ ಲಸಿಕೆ ಲಭ್ಯವಾಗಲಿದೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ಡಾ. ಸುಧಾಕರ್, ಕೋವಿಡ್ ಲಸಿಕೆ ಪಡೆಯಲು ನಾಳೆ ಅಧಿಕೃತ ಮಾಹಿತಿ ನೀಡುವವರೆಗೆ ನೋಂದಣಿ ಮಾಡಿಕೊಂಡವರು ಯಾರೂ ಆಸ್ಪತ್ರೆಯ ಬಳಿ ಹೋಗಬಾರದು ಎಂದು ಮನವಿ ಮಾಡಿದ್ದಾರೆ.

ಈಗಾಗಲೇ ನೋಂದಣಿ ಮಾಡಿಕೊಂಡವರು ಯಾರೂ ಆಸ್ಪತ್ರೆಯ ಬಳಿ ಹೋಗಬಾರದು ಎನ್ನುವ ಮೂಲಕ ಸಚಿವರು 18 ವರ್ಷದಿಂದ 44 ವರ್ಷದವರಿಗೆ ನಾಳೆ ಡೋಸ್ ಸಿಗಲ್ಲ ಎಂದು ಅಧಿಕೃತವಾಗಿ ತಿಳಿಸಿದ್ದಾರೆ.

ಉಚಿತ ವ್ಯಾಕ್ಸಿನ್ ವಿಚಾರದಲ್ಲಿ ಗೊಂದಲ ಬೇಡ. ಡೋಸ್ ವಿಚಾರದಲ್ಲಿ ಒತ್ತಾಯ, ಒತ್ತಡ ಮಾಡಲು ಸರ್ಕಾರ ಸಿದ್ದವಿದೆ. 18 ವಯಸ್ಸಿನಿಂದ 44 ವರ್ಷದವರು ಕೋವಿಡ್ ಪೋರ್ಟಲ್ ಮೂಲಕ ನೋಂದಣಿ ಮಾಡಿಸಿಕೊಳ್ಳಬಹುದು ಎಂದರು.

# ಪ್ರಾಣವಾಯು ಪೂರೈಸುವ ಸದರನ್

(1ನೇ ಪುಟದಿಂದ) ಆಗುತ್ತಿದೆ. ಬಳ್ಳಾರಿ, ಶಿವಮೊಗ್ಗ, ಹಾವೇರಿಯಿಂದಲೂ ಬೇಡಿಕೆ ಬರುತ್ತಿದೆ.

ಕೊರೊನಾ ರೋಗದ ಸಮಸ್ಯೆ ಇಲ್ಲದ ಸಮಯದಲ್ಲಿ ಇಲ್ಲಿನ ಗ್ಯಾಸ್ ಏಜೆನ್ಸಿಗೆ ಅಷ್ಟೊಂದು ಬೇಡಿಕೆ ಇರಲಿಲ್ಲ. ಸಹಜವಾದ ಸ್ಥಿತಿಯಲ್ಲಿಯೇ ಪೂರೈಕೆ ಮಾಡುತ್ತಾ ಸಾಗಿತ್ತು. ಆದರೆ, ಕೊರೊನಾ ಹೆಚ್ಚಾದಂತೆ ಬೇಡಿಕೆಯ ಪ್ರಮಾಣವೂ ಸಹ ಹೆಚ್ಚಾಗಿದೆ. ಇಲ್ಲಿನ ಗ್ಯಾಸ್ ಏಜೆನ್ಸಿಯಿಂದ ನಗರದ ಬಹುತೇಕ ಸಣ್ಣ ಕೈಗಾರಿಕೆಗಳಿಗೆ ಹಾಗೂ ಗ್ರಾಸಿಂ , ಕಾರ್ಗಿಲ್, ಸೇರಿದಂತೆ ಇತರೆ ದೊಡ್ಡ ಕಂಪನಿಗಳಿಗೆ ಕೂಡ ಆಕ್ಸಿಜನ್ ಸರಬರಾಜು ಆಗುತ್ತದೆ. ಆದರೆ ಈಗ ಮೆಡಿಕಲ್ ಆಕ್ಸಿಜನ್ ಪೂರೈಕೆ ಬಿಟ್ಟರೆ ಉಳಿದ ಯಾವುದೇ ರೀತಿಯ ಆಕ್ಸಿಜನ್ ಪೂರೈಕೆಯನ್ನು ಸ್ಥಗಿತಗೊಳಿಸಲಾಗಿದೆ.

> ದಿ ಸದರನ್ ಗ್ಯಾಸ್ ಏಜೆನ್ಸಿಯು ಸಾರ್ವಜನಿಕರ ಹಿತದೃಷ್ಟಿಯಿಂದ ಮೆಡಿಕಲ್ ಆಕ್ಸಿಜನ್ ಪೂರೈಸಲು ಮಾತ್ರ ಆದ್ಯತೆ ನೀಡುತ್ತಿದೆ. ಸರ್ಕಾರ ಲಾಕ್‌ಡೌನ್ ಮಾಡಿರುವುದರಿಂದ ಕೈಗಾರಿಕೆಗಳಿಂದ ಮತ್ತು ವೆಲ್ಡಿಂಗ್ ವರ್ಕ್‌ಶಾಪ್‌ಗಳಿಂದ ಬೇಡಿಕೆಯೂ ಕಡಿಮೆ ಇದೆ.
>
> **- ವಿ. ನಾಗರಾಜ್, ಮ್ಯಾನೇಜರ್ ದಿ ಸದರನ್ ಗ್ಯಾಸ್ ಏಜೆನ್ಸಿ, ಹರಿಹರ**

ಇಲ್ಲಿ ಬೇರೆ ಬೇರೆ ಇರುವ ಹೈಫ್ಲೋರ್ ಆಕ್ಸಿಜನ್, ಆರ್ಗನ್, ಡಿಎ, ಕಾರ್ಬನ್ ಡೈಆಕ್ಸೈಡ್, ನೈಟ್ರೋಜನ್ ಸೇರಿದಂತೆ ಹಲವು ರೀತಿಯ ಆಕ್ಸಿಜನ್‌ಗಳ ತಯಾರಿಕೆ ಇದ್ದರೂ, ಸದ್ಯಕ್ಕೆ ಅವುಗಳ ಸರಬರಾಜನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಮೆಡಿಕಲ್ ಆಕ್ಸಿಜನ್ ಮಾತ್ರ ಪೂರೈಸಲಾಗುತ್ತಿದೆ. ದಿನಕ್ಕೆ 10 ಟನ್‌ನಷ್ಟು ಆಕ್ಸಿಜನ್ ಅನ್ನು ಟ್ಯಾಂಕರ್ ಹಾಗೂ ಸಿಲಿಂಡರ್ ಮೂಲಕ ಸರಬರಾಜು ಮಾಡಲಾಗುತ್ತಿದೆ.

ಏಜೆನ್ಸಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಮೆಡಿಕಲ್ ಆಕ್ಸಿಜನ್ ಪೂರೈಸಲು ಬೇಡಿಕೆ ಬರುತ್ತಿರುವುದರಿಂದ ಅದನ್ನು ಸರಬರಾಜು ಮಾಡುವಂತೆ ತೋರಣಗಲ್ ಜಿಂದಾಲ್ ಕಂಪನಿಗೆ ಇಂಡೆಂಟ್ ಹಾಕಲಾಗಿದೆ. ಅವರು ಹೆಚ್ಚಿನ ಪ್ರಮಾಣದಲ್ಲಿ ಆಕ್ಸಿಜನ್ ಪೂರೈಸಲು ಮುಂದಾದರೆ ಶೇಖರಣೆ ಮಾಡುವುದಕ್ಕೆ ಬೇಕಾದ ಎಲ್ಲಾ ಸಿದ್ಧತೆ ಸಹ ಮಾಡಲಾಗಿದೆ.

ಗ್ಯಾಸ್ ಏಜೆನ್ಸಿಯಲ್ಲಿ ಆಕ್ಸಿಜನ್ ಪೂರೈಕೆ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಪ್ರತಿದಿನ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಹಾಗೂ ಸಿಪಿಐ ಸತೀಶ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆಯುತ್ತಿದ್ದಾರೆ. ಇಲ್ಲಿನ ಸಿಬ್ಬಂದಿಗಳಾದ ಮ್ಯಾನೇಜರ್ ವಿ. ನಾಗರಾಜ್, ಇಂಜಿನಿಯರ್ ಮಧುಕೇಶವ್, ದೀಕ್ಷಿತ್ ಆಕ್ಸಿಜನ್ ಪೂರೈಸಲು ಬೆಳಿಗ್ಗೆಯಿಂದ ತಡರಾತ್ರಿವರೆಗೆ ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ.


**ಸೈಟ್, ಮನೆ ಮಾರಾಟಕ್ಕೆ / ಖರೀದಿಗೆ**
ಎಂ.ಸಿ.ಸಿ 'ಎ', 'ಬಿ' ಬ್ಲಾಕ್ 40x60 ಸೈಟು,ಮನೆ, ಸಿದ್ದವೀರಪ್ಪ & ಆಂಜನೇಯ ಬಡಾವಣೆ 30x40, 40x60, 40x50 ಸೈಟು ಮನೆ, ಡಾಲರ್ಸ್ ಕಾಲೋನಿ, ರಶ್ಮಿ, ಎಸ್.ಎಸ್. ಲೇಔಟ್ 40x60, 30x40 ಸೈಟು ಮನೆಗಳು ಮಾರಾಟಕ್ಕಿವೆ, ಪಿ.ಜೆ. ಬಡಾವಣೆ ಸೈಟ್‌ಗಳು ಮಾರಾಟ ಮತ್ತು ಖರೀದಿಗೆ ವಿಚಾರಿಸಿ
**ವೀರೇಶ್ : 76768 57676**

**ಬಿಲ್ಡಿಂಗ್ ಮಾರಾಟಕ್ಕಿದೆ**
ವೈಷ್ಣವಿ ನಿಲಯ, 3ನೇ ಬಸ್ ಸ್ಟಾಪ್, 10ನೇ ಕ್ರಾಸ್, ಟಿ.ಬಿ. ಬಡಾವಣೆ, ವಿದ್ಯಾನಗರ, ದಾವಣಗೆರೆ. 30x40 ಅಳತೆಯ (33 ಚದರ) 3 ಮಹಡಿ ಮನೆ ಮಾರಾಟಕ್ಕಿದೆ.
**95387 56409, 93410 21209**

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : **98453 17181**

**ಕಮರ್ಷಿಯಲ್ ಸೈಟ್‌ಗಳು ಮಾರಾಟಕ್ಕಿವೆ**
31x34 North ಪಾರ್ಕ್ ಪಕ್ಕ, ಸಿದ್ದವೀರಪ್ಪ ಬಡಾವಣೆಯಲ್ಲಿ, 30x34 West, ಸರಸ್ವತಿ ಬಡಾವಣೆ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಸೈಟುಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ ಇವೆ**
ವಿದ್ಯಾನಗರ, ವಿನಾಯಕ ಬಡಾವಣೆ, ಸ್ವಾಮಿ ವಿವೇಕಾನಂದ ಬಡಾವಣೆ, ಆಂಜನೇಯ ಬಡಾವಣೆ, ಬನಶಂಕರಿ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್, ವಿದ್ಯಾನಗರ
**97421 44715**

**ಮನೆಗಳು ಮಾರಾಟಕ್ಕಿವೆ**
40x60 North, 3 ಬೆಡ್ ರೂಂ, ಮನೆ ಕುವೆಂಪು ಬಡಾವಣೆಯಲ್ಲಿ, 30x40 west, 30x50 west ಹೊಸ ಮನೆಗಳು ಹೈಟೆಕ್ ಲೇಔಟ್‌ನಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಎನ್. ಶ್ರೀ ಧರ್ ಮತ್ತು ಕುಟುಂಬ ವರ್ಗ
ಪವನ್ ಇಂಜಿನಿಯರಿಂಗ್ ವರ್ಕ್ಸ್
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಮಹಿಳೆ ಬೇಕಾಗಿದ್ದಾರೆ**
ಪ್ರತಿದಿನ ಸಂಜೆ 5.30 ರಿಂದ ಬೆಳಿಗ್ಗೆ 8.30ರವರೆಗೆ ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
**63639 54459**

**ಮನೆ ಲೀಸಿಗೆ ಇದೆ**
ಶಾಮನೂರು ಮಲ್ಲಿಕಾರ್ಜುನ್ ಬಡಾವಣೆಯಲ್ಲಿ 15x40 ರ ಬೋರ್‌ವೆಲ್ ನೀರಿನ ವ್ಯವಸ್ಥೆ ಇರುವ ಇಂಡಿಪೆಂಡೆಂಟ್ ಮನೆ ಲೀಸಿಗೆ ಇದೆ. ಸಂಪರ್ಕಿಸಿ
**94486 85660**

**ಜಮೀನು ಕೊಳ್ಳಲು ಬೇಕಾಗಿರುತ್ತದೆ. ಹರಿಹರ, ಬಾತಿ, ಕೊಂಡಜ್ಜಿ**
**74112 50447**

**ತಕ್ಷಣ ಬೇಕಾಗಿದ್ದಾರೆ**
ನುರಿತ ಕಂಪ್ಯೂಟರ್ ಆಪರೇಟರ್-2 (ಕನ್ನಡ ಮತ್ತು ಇಂಗ್ಲಿಷ್ )
ಅನುಭವಿ ಸ್ಟಾಫ್ ನರ್ಸ್‌ಗಳು (GNM/ANM), ಸಂಪರ್ಕಿಸಿ
ಆಶ್ರಯ ಆಸ್ಪತ್ರೆ
**9886802626, 8792629379**

**SBI Life Insurance ಗೆ**
SSLC/PUC ಓದಿರುವ ಪುರುಷರು/ ಮಹಿಳೆಯರು ಪಾರ್ಟ್ ಟೈಮ್ ಕೆಲಸ ಮಾಡಿ ತಿಂಗಳಿಗೆ 25,000/- ಆದಾಯ ಗಳಿಸ ಬಹುದು
**99009 19091**

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ಶುದ್ಧ ಕೊಬ್ಬರಿ, ಕುಸುಬಿ, ಶೇಂಗಾ ಎಣ್ಣೆಯಿಂದ ತಯಾರಿಸಿದ ಸಿರಿಧಾನ್ಯದ ಸ್ಪೆಷಲ್ ಖಾರ, ಬೆಳ್ಳುಳ್ಳಿ ಖಾರ, ರಾಗಿ ಖಾರ ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ. ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ತಯಾರಿಸಿದ ಸಿರಿಧಾನ್ಯದ, ದ್ವಿದಳ ಧಾನ್ಯದ ಸ್ಪೆಷಲ್ ಮಾಲ್ಟ್, ಸಿರಿಧಾನ್ಯದ ಚಪಾತಿ ಹಿಟ್ಟು, ಸಿರಿಧಾನ್ಯದ ರೊಟ್ಟಿ ಹಿಟ್ಟು ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**Wanted Dealers**
**ANU Solar Pvt Ltd**
P.J. Extn, Davanagere.
Contact
**99645 11172**
**99649 68999**

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಹಾಗೂ ಆಯಾ ಬೇಕಾಗಿದ್ದಾರೆ. ಆಕರ್ಷಕ ವೇತನ ಹಾಗೂ ಪರಸ್ಥಳದವರಿಗೆ ವಸತಿ ನೀಡಲಾಗುವುದು.
**ಕರೆ ಮಾಡಿ : 80735 15690**

**ಮನೆ ಅಥವಾ ಸೈಟು ಬೇಕಾಗಿದೆ**
ವಿದ್ಯಾನಗರ, ತರಳಬಾಳು, ಸ್ವಾಮಿ ವಿವೇಕಾನಂದ, ವಿನಾಯಕ ಬಡಾವಣೆಯಲ್ಲಿ ಮನೆ ಅಥವಾ ಸೈಟ್ ಮಾರವುದಿದ್ದರೆ ಸಂಪರ್ಕಿಸಿ (ಏಜೆಂಟ್‌ರಿಗೆ ಅವಕಾಶವಿಲ್ಲ)
**98809 33630**

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
**73385 80345**

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**ಮೊ. 9538777582**
ಕೆಲಸ 100% ಗ್ಯಾರಂಟಿ.

**ಸಮಯ ಬದಲಾವಣೆ**
ಸಕ್ಕರೆ ಕಾಯಿಲೆಯವರ ಅನುಕೂಲಕ್ಕಾಗಿ ಆಲೂರು ಆಸ್ಪತ್ರೆಯು ಬೆಳಿಗ್ಗೆ 7 ರಿಂದ 10 ಗಂಟೆಯವರೆಗೆ ಮತ್ತು ಬೆಳಿಗ್ಗೆ 11 ರಿಂದ 2 ಗಂಟೆಯವರೆಗೆ ಲಭ್ಯವಿರುತ್ತದೆ.
**ಮೊ. : 88677 75564**

**ಹೋಟೆಲ್ ಅಯೋಧ್ಯಾ**
ದೊಡ್ಡಪೇಟೆ, ದಾವಣಗೆರೆ.
ತಿಂಡಿ, ಊಟ ಪಾರ್ಸಲ್‌ಗೆ ಸಂಪರ್ಕಿಸಿ
**99160 62963**
**99801 70600**

**Hombal.in**
ಮನೆ ಬಾಗಿಲಿಗೆ ದಿನಸಿ ಸರಬರಾಜು ಮಾಡಲಾಗುತ್ತದೆ. ದರ, ಗುಣಮಟ್ಟ, ಡೆಲಿವರಿ ಖಚಿತಪಡಿಸಿಕೊಳ್ಳಿ. ಆರ್ಡರ್ ಮಾಡಿ ರೂ. 500/- ಬೆಲೆ ಬಾಳುವ ಉಡುಗೊರೆ ಪಡೆಯಿರಿ.
**WhatsApp : 99589 38939**
**Delivery Free**

**Excellent Coaching Center for IX & X 2021-22 CBSE & State Syllabus**
**LONG TERM BATCHES**
Mathematics, Science, Social Science & English Grammar.
**STUDY IQ ACADEMY**
Davangere.
**89517 17444, 97402 15992**

**ಶ್ರೀ ಅಣೆಗೆರೆಕಟ್ಟೆ ಜ್ಯೋತಿಷ್ಯ ಫಲ**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ವಶೀಕರಣ, ಮನ:ಪ್ರೇತಬಾಧೆ, ಅಂಗುಷ್ಠ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಸಂಪರ್ಕಿಸಿ :
**9980770791, 9606818273**

**ಸೈಟ್ ಬೇಕಾಗಿದೆ**
**ಶಿವ ಪಾರ್ವತಿ ಲೇಔಟ್‌ನಲ್ಲಿ 30x50 ಸೈಟ್ ಬೇಕಾಗಿದೆ.**
**9036281419**

**ಸೈಟ್ ಮಾರಾಟಕ್ಕಿದೆ**
ದೊಡ್ಡಪೇಟೆ ವಿರಕ್ತಮಠದ ಎದುರು 10x60 ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ.
**8618182332**
ಸೈಟ್ ಮಾರುವುದಕ್ಕೆ ಕೊಳ್ಳುವುದಕ್ಕೆ ಸಂಪರ್ಕಿಸಿ


**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
**ಫೋ. : 96062 82814**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**State Bank of India**
**'ಜನ್‌ಧನ್ ಖಾತೆ' ಮಾಡಲಾಗುತ್ತದೆ**
(10 ವರ್ಷ ಮೇಲಿನವರಿಗೆ)
ಸಮಯ : ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, # 264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : **99806 10005**

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಹತ್ತನೇ ವರ್ಷದ ಪುಣ್ಯಸ್ಮರಣೆ**



**ಶ್ರೀ ಎ. ಈರಪ್ಪ ಭದ್ರಣ್ಣನವರ್**
ನಿಧನ : 01.05.2011

ಒಬ್ಬ ದಾರ್ಶನಿಕನಂತೆ ನೀವು ಬದುಕಿದಿರಿ
ನಿಮ್ಮ ಬದುಕಲ್ಲಿ ಪರಿಶ್ರಮ, ನಮ್ರತೆ ಮತ್ತು ಅನುಕಂಪವನ್ನು ತುಂಬಿದಿರಿ
ಶ್ರೇಷ್ಠತೆಯನ್ನು ಸಾಧಿಸಲು ನೀವು ನಮಗೆ ಉತ್ತೇಜನ ನೀಡಿದಿರಿ
ನಿಮ್ಮ ಪ್ರತಿಯೊಂದು ಹೆಜ್ಜೆಯೂ ನಮಗೆ ಸ್ಫೂರ್ತಿಯಾಯಿತು
ನಿಮ್ಮ ಮಾರ್ಗದರ್ಶನದಲ್ಲಿ ನಾವು ಸಫಲತೆಯನ್ನು ಪಡೆದೆವು
ನಿಮ್ಮ ಪ್ರೀತಿಯ ನೆನಪೇ ನಮ್ಮ ಮನಸ್ಸಿಗೆ ಸಮಾಧಾನ

ಪೂಜ್ಯರೇ,
ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳು ಕಳೆದವು.
ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲೇ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿ ರುವ...


**ಧರ್ಮಪತ್ನಿ ಶ್ರೀಮತಿ ಯಲ್ಲಮ್ಮ (ಶಾರದಮ್ಮ) ಮತ್ತು ಮಕ್ಕಳು, ಮೊಮ್ಮಕ್ಕಳು ಭದ್ರಣ್ಣನವರ್ ವಂಶಸ್ಥರು ಹಾಗೂ ಬಂಧು-ಮಿತ್ರರು, ದಾವಣಗೆರೆ.**

**JOBS**
**MCS ACADEMY**
Training & Placement Cell
**98444 92888**

**ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ಜ್ಯೋತಿಷ್ಯಾಲಯ**
**ಪಂಡಿತ್ ಚಂದ್ರಶೇಖರ್ ಗುರೂಜಿ**
ನಂಬರ್ ಒನ್ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ದಾಂಪತ್ಯ ಸಮಸ್ಯೆ, ಸ್ತ್ರೀ-ಪುರುಷ ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿದ್ದರೂ 3ದಿನದಲ್ಲಿ ಶಾಶ್ವತ ಪರಿಹಾರ. ಆಗದಿದ್ದಲ್ಲಿ ಹಣ ವಾಪಸ್
**ಮೊ: 99800 57857**

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
**89716 99826**

|| ಶ್ರೀ ವೆಂಕಟೇಶ್ವರ ಪ್ರಸನ್ನ ||
**ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, 4ನೇ ಮೇನ್, 4ನೇ ಕ್ರಾಸ್ ವಾಸಿ **ಶ್ರೀಮತಿ ರತ್ನಗಿರಿಧರ್ ಮತ್ತು ಮಕ್ಕಳು** ಮಾಡುವ ವಿಜ್ಞಾಪನೆಗಳು.
ದಿ. 21.04.2021 ರ ಬುಧವಾರ ನನ್ನ ಪೂಜ್ಯ ಪತಿಯವರಾದ
**ಶ್ರೀ ಮೆಡುಕುಂದ ಎಂ.ಸಿ. ಗಿರಿಧರ್**
ಇವರು ವೈಕುಂಠ ವಾಸಿಗಳಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ವೈಕುಂಠ ಸಮಾರಾಧನೆಯನ್ನು**
**ದಿ. 01.05.2021 ರ ಶನಿವಾರ ಸಂಜೆ 7 ಗಂಟೆಗೆ**
ಎಸ್.ಎಸ್. ಲೇಔಟ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ: **ಶ್ರೀಮತಿ ರತ್ನ ಗಿರಿಧರ್**, ಮಗ **ಎಂ.ಜಿ. ಸಾಗರ್**, ಸೊಸೆ: ಶ್ರೀಮತಿ ಭವಾನಿ ಸಾಗರ್, ಮಗ: **ಸಂದೀಪ್ ಎಂ.ಜಿ.**, ಮಗಳು: **ಶ್ರೀಮತಿ ಸಹನ ಗಿರಿಧರ್** ಅಳಿಯ : **ಸುರೇಶ್**, ತಂಗಿ **ಶ್ರೀಮತಿ ಸುನಂದ ಶ್ರೀ ಧರ್ ಹಾಗೂ ಮೆಡುಕುಂದ ಬಂಧು ಮಿತ್ರರು.**
**ಮೊ: 9035361666**

**ಹೆಚ್. ಬಸವರಾಜ ನಿಧನ**



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 4ನೇ ಕ್ರಾಸ್, ಬಿಐಇಟಿ ರಸ್ತೆ ವಾಸಿ ನ್ಯಾಯಾಂಗ ಇಲಾಖೆ ನಿವೃತ್ತ ನೌಕರ ಹೆಚ್. ಬಸವರಾಜ (66) ಅವರು 30.4.2021 ರ ಶುಕ್ರವಾರ ರಾತ್ರಿ 10.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01.05.2021ರ ಶನಿವಾರ ಮಧ್ಯಾಹ್ನ 2 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

# ಖಾಸಗೀಕರಣ, ಜಾಗತೀಕರಣ ಉದಾರೀಕರಣದ ಕರಿನೆರಳಲ್ಲಿ ಕಾರ್ಮಿಕ ವರ್ಗ



**ವಿಶ್ವ ಕಾರ್ಮಿಕ ದಿನಾಚರಣೆ ಆರಂಭಗೊಂಡು 135 ವರುಷಗಳು ಕಳೆದು, ಇಂದು 136 ನೇ ಆಚರಣೆ ವಿಶ್ವದಾದ್ಯಂತ ನಡೆಯುತ್ತಿದೆ. ಐಕ್ಯತೆಗಾಗಿ, ಹೋರಾಟಕ್ಕಾಗಿ, ಚಳುವಳಿಗಾಗಿ ಕಾರ್ಮಿಕರು ಕಟಿಬದ್ಧರಾಗುವ ದಿನ**

**ಒಂದೆಡೆ ಇಲ್ಲಿತನಕ ಹೋರಾಟದ ಮೂಲಕ ಗಳಿಸಿರುವ ಸೌಲಭ್ಯಗಳನ್ನು ರಕ್ಷಿಸಿಕೊಳ್ಳುವ ಸವಾಲು, ಇನ್ನೊಂದೆಡೆ ಪಡೆಯಬೇಕಾಗಿರುವ ಸೌಲಭ್ಯಗಳಿಗಾಗಿ ಹೋರಾಟ. ಒಟ್ಟಿನಲ್ಲಿ 'ಬದುಕಿಗಾಗಿ ಹೋರಾಟ - ಹೋರಾಟಕ್ಕಾಗಿ ಬದುಕು'.**

**ಇಂದು ವಿಶ್ವ ಕಾರ್ಮಿಕ ದಿನಾಚರಣೆ**

ಮೇ 1 - ವಿಶ್ವ ಕಾರ್ಮಿಕರ ದಿನಾಚರಣೆ ಎಂದೊಡನೆಯೇ 8 ಘಂಟೆಯ ಕೆಲಸದ ಅವಧಿಯ ಬೇಡಿಕೆಯನ್ನು ಮುಂದಿಟ್ಟುಕೊಂಡು 1886 ರ ಮೇ ಒಂದರಂದು ಅಮೇರಿಕಾದ ಚಿಕಾಗೋದ ಇಲಿನಾಯ್ಸ್ ಪ್ರದೇಶದಲ್ಲಿ ಎಡಪಂಥೀಯ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಲಕ್ಷಾಂತರ ಸಂಖ್ಯೆಯ ಕಾರ್ಮಿಕರು ನಡೆಸಿದ ಅಭೂತಪೂರ್ವ ಹೋರಾಟವು ನೆನಪಿಗೆ ಬರುತ್ತದೆ. ದಿನದ 24 ಘಂಟೆ ಪೂರ್ತಿ ಮಾಲೀಕರ ಕಾರ್ಖಾನೆಗಳಲ್ಲಿ ದುಡಿಯಬೇಕಾಗಿದ್ದ ಕೆಲಸಗಾರರು ವಿಶ್ರಾಂತಿ, ಕೌಟುಂಬಿಕ ಜೀವನ ಹಾಗೂ ಸಾಮಾಜಿಕ ಜೀವನದಿಂದ ವಂಚಿತರಾಗಿದ್ದರು. 19 ನೇ ಶತಮಾನವು ಅಮೇರಿಕಾ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಕೈಗಾರಿಕಾ ಕ್ರಾಂತಿಗೆ ಸಾಕ್ಷಿಯಾಗಿದ್ದ ಪರಿಣಾಮವಾಗಿ ಅಸಂಖ್ಯಾತ ಉದ್ಯೋಗ ಸೃಷ್ಟಿಗೆ ಕಾರಣೀಭೂತವಾಗಿದ್ದರೂ ಸಹ ಕಾರ್ಮಿಕರ ಬದುಕು ಮಾತ್ರ ಅತ್ಯಂತ ನಿಕೃಷ್ಟವಾದ ಸ್ಥಿತಿಯಲ್ಲಿತ್ತು. ಕಾರ್ಮಿಕರಿಗೆ ಕನಿಷ್ಠ ಸೌಲಭ್ಯವೂ ಸಿಗುತ್ತಿರಲಿಲ್ಲ. ಪ್ರಾಣಿಗಳ ರೀತಿ ಕಾರ್ಮಿಕರನ್ನು ನಡೆಸಿಕೊಳ್ಳಲಾಗುತ್ತಿತ್ತು. ಕಾರ್ಮಿಕರ ಶ್ರಮ, ಬೆವರು ಮಾಲೀಕರ ಖಜಾನೆ ತುಂಬಿಸುತ್ತಿತ್ತೇ ಹೊರತು ಲಾಭದ ಒಂದಂಶವೂ ಕಾರ್ಮಿಕರಿಗೆ ತಲುಪುತ್ತಿರಲಿಲ್ಲ. ಮೂಲ ಭೂತ ಸೌಕರ್ಯ, ವೈದ್ಯಕೀಯ, ಶಿಕ್ಷಣ ಸೌಲಭ್ಯಗಳಂತೂ ಮರೀಚಿಕೆಯಾಗಿತ್ತು. ಕಾರ್ಮಿಕರ ಹಿತ ರಕ್ಷಣೆಯ ಯಾವುದೇ ಕಾನೂನುಗಳು, ಒಪ್ಪಂದಗಳು ಇರದಿದ್ದ ಕಾಲವದು. ಅಂತಹ ಪ್ರತಿಕೂಲದ ಕಾಲಘಟ್ಟದಲ್ಲಿ ಕಾರ್ಮಿಕರನ್ನು ಸಂಘಟಿಸಿ, ಒಗ್ಗೂಡಿಸಿ, ಹೋರಾಟಕ್ಕೆ ಅಣಿಗೊಳಿಸಿ 1986 ರ ಮೇ ನಲ್ಲಿ ನಡೆಸಿದ ಹೋರಾಟ ಚಾರಿತ್ರಿಕವಾಗಿ ದಾಖಲಾಯಿತು. ಅದೊಂದು ಸಾಮಾನ್ಯ ಹೋರಾಟವಾಗಿರಲಿಲ್ಲ. ರಕ್ತ ಕ್ರಾಂತಿಯೇ ಆಯಿತು. ಹೋರಾಟವನ್ನು ಧಮನಿಸಲು ಮಾಲೀಕ ವರ್ಗದಿಂದ ವಾಮಮಾರ್ಗದ ಅನೇಕ ಕ್ರೂರ ಪ್ರಯತ್ನಗಳು ನಡೆದವು. ಕಾರ್ಮಿಕರ ಮೇಲೆ ದಾಳಿ ಮಾಡಿಸಲಾಯಿತು. ಕಾರ್ಮಿಕ ಸಂಘಟನೆಗಳು ಎದೆಗುಂದಲಿಲ್ಲ, ಕಾರ್ಮಿಕರು ಹಿಂದಡಿಯಿಡಲಿಲ್ಲ.

ಕೊನೆಗೂ ಹೋರಾಟ, ತ್ಯಾಗ, ಬಲಿದಾನದ ಫಲವಾಗಿ ಕಾರ್ಮಿಕರ ಹೋರಾಟವು ವಿಜಯದಲ್ಲಿ ಅಂತ್ಯಗೊಂಡಿತು. ನ್ಯಾಯಯುತ ಬೇಡಿಕೆಯಾದ ಕಾರ್ಮಿಕರಿಗೆ ದಿನದ 8 ಘಂಟೆಯ ಕೆಲಸದ ಅವಧಿ ಜಾರಿಗೆ ಬಂತು. 8 ಘಂಟೆ ಕೆಲಸ - 8 ಘಂಟೆ ಸಾಮಾಜಿಕ ಜೀವನ - 8 ಘಂಟೆ ವಿಶ್ರಾಂತಿ ಎಂಬ ಪರಿಕಲ್ಪನೆಯು ವಿಶ್ವದಾದ್ಯಂತ ಜಾರಿಯಾಯಿತು. ಕಾರ್ಮಿಕರನ್ನು ಸಂಘಟಿಸಿ, ಹೋರಾಟವನ್ನು ರೂಪಿಸಿ ವಿಜಯವನ್ನು ತಂದುಕೊಟ್ಟ ಕೀರ್ತಿ ಎಡಪಂಥೀಯ ಕಾರ್ಮಿಕ ಸಂಘಟನೆಗಳಿಗೆ ಸಲ್ಲುತ್ತದೆ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಹೋರಾಟ ನಡೆದ ಸ್ಥಳವಾದ ಚಿಕಾಗೋ ನಗರಿಯ ಇಲಿನಾಯ್ಸ್ ಪ್ರದೇಶದ ಹೇ ಮಾರ್ಕೆಟ್ ಚೌಕ ಇಂದಿಗೂ ಕಾರ್ಮಿಕರ ಬಲಿದಾನದ ದ್ಯೋತಕವಾಗಿ ಚಿರಸ್ಥಾಯಿಯಾಗಿ ಉಳಿದಿದೆ. ಈ ಚರಿತ್ರಾರ್ಹ ಹೋರಾಟದ ನೆನಪಿಗಾಗಿ ಪ್ರತೀ ವರ್ಷ ಮೇ ಒಂದನೇ ತಾರೀಕನ್ನು ವಿಶ್ವದಾದ್ಯಂತ 'ಕಾರ್ಮಿಕ ದಿನಾಚರಣೆ' ಯನ್ನಾಗಿ ಆಚರಿಸಲು ನಿರ್ಧರಿಸಲಾಯಿತು. ಇದನ್ನು 'ಮೇ ಡೇ', 'ಲೇಬರ್ ಡೇ' ಅನ್ನುವ ಹೆಸರಿನಿಂದಲೂ ಕರೆಯಲಾಗುತ್ತದೆ.

1886 ರಿಂದ ಆರಂಭಗೊಂಡು ಇಲ್ಲಿಯ ತನಕ ಅಸಂಖ್ಯಾತ ಕಾರ್ಮಿಕ ಚಳುವಳಿಗಳು ಮತ್ತು ಹೋರಾಟಗಳು ನಡೆದಿವೆ. ಅದೇ ರೀತಿಯಲ್ಲಿ ಕಾರ್ಮಿಕ ಸಂಘಟನೆಗಳೂ ಅಸಂಖ್ಯಾತ ಸಂಖ್ಯೆಯಲ್ಲಿವೆ. ನಿರಂತರವಾದ ಸಂಘಟನಾತ್ಮಕ ಕೆಲಸ, ನಿರಂತರ ಹೋರಾಟವೇ ಕಾರ್ಮಿಕ ಸಂಘಗಳ ಉಸಿರು.

ಹೋರಾಟದ ಕಿಚ್ಚು ನಂದಿತು ಅಂತಾದರೆ, ಕಾರ್ಮಿಕ ವರ್ಗದ ಸ್ಥಿತಿ 1886ರ ಪೂರ್ವ ಪರಿಸ್ಥಿತಿಗೆ ಮರಳುವುದರಲ್ಲಿ ಸಂಶಯವಿಲ್ಲ. ಒಂದೆಡೆ ಇಲ್ಲಿತನಕ ಹೋರಾಟದ ಮೂಲಕ ಗಳಿಸಿರುವ ಸೌಲಭ್ಯಗಳನ್ನು ರಕ್ಷಿಸಿಕೊಳ್ಳುವ ಸವಾಲು, ಇನ್ನೊಂದೆಡೆ ಪಡೆಯಬೇಕಾಗಿರುವ ಸೌಲಭ್ಯಗಳಿಗಾಗಿ ಹೋರಾಟ. ಒಟ್ಟಿನಲ್ಲಿ 'ಬದುಕಿಗಾಗಿ ಹೋರಾಟ - ಹೋರಾಟಕ್ಕಾಗಿ ಬದುಕು'. ಸರ್ಕಾರಗಳು ಯಾವತ್ತಿಗೂ ಮಾಲೀಕರ ಪರವೇ ಇರುವುದರಿಂದ ಯಾವಾಗಲೂ ವಿರೋಧ ಪಕ್ಷದ ನೆಲೆಯಲ್ಲಿಯೇ ನಿಂತು ಹೋರಾಡಬೇಕಾದ ಅನಿವಾರ್ಯತೆಯೂ ಇದೆ. ಆಳುವ ಸರಕಾರಗಳನ್ನು ಸದಾ ಕಾಲ ವಿರೋಧಿಸಿಕೊಂಡೇ ಹೋರಾಡುವುದು ಸಂಘಟನೆಗಳಿಗೆ ನಿಜಕ್ಕೂ ಸವಾಲಿನ ಕೆಲಸ. ಪ್ರತಿಯೊಂದು ನ್ಯಾಯಯುತ ಬೇಡಿಕೆಗಳ ಈಡೇರಿಕೆಗೂ ಹೋರಾಟದ ಮೊರೆ ಹೋಗಬೇಕಾದ ಪರಿಸ್ಥಿತಿ ಇದೆ. ದೇಶದ ಅಭಿವೃದ್ಧಿಗೆ ಕಾರ್ಮಿಕರೂ ಕಾರಣ ಎನ್ನುವುದನ್ನು ಅರಿತುಕೊಂಡು ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ಸೌಲಭ್ಯಗಳನ್ನು ನೀಡುವ ಉದಾರತೆ ಸರ್ಕಾರ ನಡೆಸುವವರಿಗೆ ಇರಬೇಕಾದ್ದು ಅತ್ಯಗತ್ಯವಾಗಿದೆ.

1991 ರ ನಂತರ ಬಂದ ಕೇಂದ್ರ ಸರ್ಕಾರ ಜಾರಿಗೆ ತಂದ ಖಾಸಗೀಕರಣ, ಜಾಗತೀಕರಣ, ಉದಾರೀಕರಣದ ಕರಿನೆರಳು ಕಾರ್ಮಿಕ ವರ್ಗವನ್ನು ಹೈರಾಣಾಗಿಸಿವೆ. ಮಾಲೀಕರ ಒತ್ತಡದಿಂದಾಗಿ ಆಗಿಂದಾಗ್ಗೆ ಕಾರ್ಮಿಕರ ಕಾಯ್ದೆಗೆ ತಿದ್ದುಪಡಿ ತರುವುದರ ಮೂಲಕ ಕಾರ್ಮಿಕರ ಪರವಾದ ಕಾನೂನುಗಳನ್ನು ದುರ್ಬಲಗೊಳಿಸಿವೆ. ಇದು ಕಾರ್ಮಿಕ ಸಂಘಟನೆಗಳಿಗೆ ಇನ್ನಷ್ಟು ಮುಳುವಾಗುತ್ತಿದೆ. ಸಂಸತ್ತಿನಲ್ಲಿ ಕಾರ್ಮಿಕರ ಪರವಾಗಿ ಮಾತನಾಡುವ ಜನಪ್ರತಿನಿಧಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಇದು ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ತರಲು ಸಹಕಾರಿಯಾಗಿದೆ.

ದೇಶದ ಅತ್ಯಂತ ದೊಡ್ಡ ಸಂಖ್ಯೆಯಲ್ಲಿರುವ ಕಾರ್ಮಿಕ ವರ್ಗ ರಾಜಕೀಯ ಶಕ್ತಿಯಾಗಿ ರೂಪಾಂತರ ಗೊಳ್ಳದಿರುವುದೇ ಇಂದಿನ ಕಾರ್ಮಿಕ ವಿರೋಧಿ ಆಡಳಿತಕ್ಕೆ ಕಾರಣವಾಗಿದೆ. ಕಾರ್ಮಿಕರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವುದು ಕೂಡಾ ಕಾರ್ಮಿಕ ಸಂಘಗಳಿಗೆ ಸವಾಲಿನ ಕೆಲಸವಾಗಿದೆ. ಈ ಸವಾಲನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದಲ್ಲಿ ಮಾತ್ರ ಕಾರ್ಮಿಕ ವರ್ಗ ನೆಮ್ಮದಿಯ ಜೀವನ ಸಾಗಿಸುವ ವಾತಾವರಣ ಸೃಷ್ಟಿಯಾಗಬಹುದೇನೋ.

ಒಬ್ಬ ಪ್ರಜ್ಞಾವಂತ, ಜವಾಬ್ದಾರಿಯುತ ಮತ್ತು ನಿಷ್ಠಾವಂತ ಕಾರ್ಮಿಕ ತನ್ನ ಮನಸ್ಸಿನಲ್ಲಿಯೇ ಕಾರ್ಮಿಕ ವರ್ಗದ ಪ್ರಸ್ತುತ ಸನ್ನಿವೇಶ, ಮುಂದಿರುವ ಸಮಸ್ಯೆಗಳು, ಸವಾಲುಗಳು, ಅದಕ್ಕೆ ತಕ್ಕನಾಗಿ ಭವಿಷ್ಯದಲ್ಲಿ ರೂಪಿಸ ಬೇಕಾದ ಹೋರಾಟ ಇವುಗಳ ಕುರಿತಾಗಿ ಚಿಂತನೆ ನಡೆಸಿ, ತತ್ವ ಸಿದ್ಧಾಂತಗಳ ಮೂಲಕ ಪ್ರಬಲ ಕಾರ್ಮಿಕ ಮುಖಂಡನಾಗಿ ಹೊರಹೊಮ್ಮಿ ಕಾರ್ಮಿಕ ವರ್ಗವನ್ನು ಮುನ್ನಡೆಸುವ ಪ್ರತಿಜ್ಞೆಯನ್ನು ಮಾಡುವ ಮೂಲಕ ಕಾರ್ಮಿಕ ದಿನವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿಕೊಳ್ಳಬಹುದಾಗಿದೆ.



- ಕೆ.ರಾಘವೇಂದ್ರ ನಾಯರಿ
ದಾವಣಗೆರೆ.
krnairycbeu@gmail.com

## ಕೊರೊನಾ ಕಷ್ಟ ಹೇಳುವವರನ್ನು ದಮನಿಸಬಾರದು : ಸುಪ್ರೀಂ

ನವದೆಹಲಿ, ಏ. 30 – ಕೊರೊನಾ ಎರಡನೇ ಅಲೆ ರಾಷ್ಟ್ರೀಯ ಬಿಕ್ಕಟ್ಟು ಎಂದಿ ರುವ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾ ರದಿಂದ ಹಿಡಿದು ಪೊಲೀಸ್ ಮುಖ್ಯಸ್ಥರ ವರೆಗೆ ಯಾರೂ ಕೊರೊನಾ ಸಂಕಷ್ಟದ ಗುರಿತು ಇಂಟರ್‌ನೆಟ್‌ನಲ್ಲಿ ಹೇಳುವವರನ್ನು ದಮನಿಸಬಾರದು ಎಂದು ಎಚ್ಚರಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ನೆರವಿ ಗಾಗಿ ಕೇಳುವವರನ್ನು ದಮನಿಸುವ ಮೂಲಕ ಮಾಹಿತಿ, ಮುಕ್ತವಾಗಿ ಹರಿಯುವುದನ್ನು ತಡೆಯುವ ಪ್ರಯತ್ನವನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಮಾಹಿತಿ ಮುಕ್ತವಾಗಿ ಹರಿಯಬೇಕು, ನಾವು ನಾಗರಿಕ ಧ್ವನಿ ಆಲಿಸಬೇಕು ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ಹೇಳಿದೆ. ಆಕ್ಸಿಜನ್, ಬೆಡ್ ಇಲ್ಲವೇ ವೈದ್ಯರ ಕೊರತೆಯಂತಹ ವಿಷಯಗಳ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ನೀಡುವ ಯಾರನ್ನೇ ಆಗಲಿ ಗಾಳಿ ಸುದ್ದಿ ಹರಡುವವರು ಎಂದು ಪರಿಗಣಿಸಬಾರದು ಎಂದು ನ್ಯಾಯಾಲಯ ಹೇಳಿದೆ.

ಸಂಕಷ್ಟದಲ್ಲಿರುವ ನಾಗರಿಕರು ಮಾಡುವ ಪೋಸ್ಟ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಲಾಗುವುದು ಎಂದು ನ್ಯಾಯಾಲಯ ಹೇಳಿದೆ. ಈ ಆದೇಶ ಹೊರಡಿಸಿರುವ ಪೀಠದಲ್ಲಿ ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಹಾಗೂ ಎಸ್. ರವೀಂದ್ರ ಭಟ್ ಅವರಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಎಚ್ಚರಿಕೆಗಳನ್ನು ನೀಡುವವರ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಉತ್ತರ ಪ್ರದೇಶ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ.

## ಕೈದಾಳೆ ಗ್ರಾ.ಪಂ. : ಕೊರೊನಾ ಜಾಗೃತಿ



ದಾವಣಗೆರೆ, ಏ.30- ಕೈದಾಳೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕೋವಿಡ್ ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

ಮನೆ ಮನೆಗೆ ಭೇಟಿ ನೀಡಿ, ಜಾಗೃತಿ ಮೂಡಿಸಲಾಗುತ್ತಿದ್ದು, 10ಗಂಟೆಯ ನಂತರವೂ ತೆರೆದಿದ್ದ ಅಂಗಡಿಗಳನ್ನು ನೋಟಿಸ್ ನೀಡುವ ಮೂಲಕ ಮುಚ್ಚಿಸ ಲಾಯಿತು. ಇತರೆ ಜಿಲ್ಲೆಗಳಿಂದ ಗ್ರಾಮಗಳಿಗೆ ವಲಸೆ ಬರುತ್ತಿರುವವರ ಬಗ್ಗೆ ಮಾಹಿತಿ ಪಡೆದು ಅವರ ಆರೋಗ್ಯ ವಿಚಾರಣೆ ಮಾಡುವ ಪ್ರಕಿಯೆ ಆರಂಭಿಸ ಲಾಗಿದೆ. ಗ್ರಾ.ಪಂ. ಅಧ್ಯಕ್ಷೆ ಜಿ.ಆರ್. ನವ್ಯ ಹಾಗೂ ಉಪಾಧ್ಯಕ್ಷರು, ಸದಸ್ಯರು, ಗ್ರಾಮ ಸಿಬ್ಬಂದಿಗಳು ಹಾಗೂ ಕಾರ್ಯದರ್ಶಿಗಳು ಇದಕ್ಕೆ ಸಾಥ್ ನೀಡಿದರು.

## ಉಚಿತ ಹೊಲಿಗೆ ಯಂತ್ರ ವಿತರಣೆ



ದಾವಣಗೆರೆ, ಏ.30- ರೋಟರಿ ಕ್ಲಬ್ ಮಿಡ್‌ಟೌನ್ ದಾವಣಗೆರೆ ಇವರ ವತಿಯಿಂದ 10 ಜನ ಬಡ ಹೆಣ್ಣುಮಕ್ಕಳಿಗೆ ಹೊಲಿಗೆ ಯಂತ್ರಗಳನ್ನು ಉಚಿತವಾಗಿ (ದಾನವಾಗಿ) ನೀಡಲಾಯಿತು. ಈ ಸಂದರ್ಭದಲ್ಲಿ ರೋಟರಿ ಕ್ಲಬ್ ಮಿಡ್‌ಟೌನ್ ಅಧ್ಯಕ್ಷ ಎ.ಎನ್.ಶೇಖರ್, ಎಸ್.ಟಿ.ಕುಸುಮ ಶ್ರೇಷ್ಠಿ, ಸಿದ್ಧನಗೌಡ ಉಪಸ್ಥಿತರಿದ್ದರು.

# ದುಡ್ಡು ಕೊಡದೇ ಹೋಗದ ಆಂಬ್ಯುಲೆನ್ಸ್



**ಶವವಿಟ್ಟುಕೊಂಡು ಸಂಬಂಧಿಕರ ಪರದಾಟ**

ದಾವಣಗೆರೆ, ಏ.30- ಆಂಬ್ಯುಲೆನ್ಸ್ ಗೆ ದುಡ್ಡು ಕೊಡದಿದ್ದಕ್ಕೆ ಚಿತಾಗಾರಕ್ಕೆ ಶವವನ್ನು ಆಂಬ್ಯುಲೆನ್ಸ್ ಮೂಲಕ ತೆಗೆದುಕೊಂಡು ಹೋಗದ ಕಾರಣ ಶವವಿಟ್ಟುಕೊಂಡು ಎರಡು ಗಂಟೆಗಳ ಕಾಲ ಸಂಬಂಧಿಕರು ಪರದಾಡಿರುವ ಅಮಾನವೀಯ ಘಟನೆ ಚಿಗಟೇರಿ ಜಿಲ್ಲಾಸ್ಪತ್ರೆಯ ಆವರಣದಲ್ಲಿ ವರದಿಯಾಗಿದೆ.

ನಗರದ ಶಿವಕುಮಾರಸ್ವಾಮಿ ಬಡಾವಣೆಯ ಖಾಸಗಿ ಬಸ್ ಏಜೆಂಟ್ ಮಂಜಪ್ಪ ಎಂಬುವರು ಇಂದು ಕೊರೊನಾದಿಂದ ಜಿಲ್ಲಾಸ್ಪತ್ರೆಯಲ್ಲಿ ಮೃತಪಟ್ಟರು. ಬೆಳಿಗ್ಗೆ ಶವದ ಅಂತ್ಯ ಸಂಸ್ಕಾರ ನಡೆಸಲು ಚಿತಾಗಾರಕ್ಕೆ ತೆಗೆದುಕೊಂಡು ಹೋಗಬೇಕಿತ್ತು. ಆದರೆ, 4 ಸಾವಿರ ಹಣ ನೀಡದೇ ಆಂಬ್ಯುಲೆನ್ಸ್ ಅನ್ನು ಮುಂದೆ ಬಿಡಲು ಆಂಬ್ಯುಲೆನ್ಸ್ ಚಾಲಕ ತಯಾರಿರಲಿಲ್ಲ. ಹೀಗಾಗಿ, ಶವವನ್ನು ಇಟ್ಟುಕೊಂಡು ಜಿಲ್ಲಾಸ್ಪತ್ರೆಯ ಶವಾಗಾರದ ಆವರಣದಲ್ಲಿ ಸಂಬಂಧಿಕರು ಎರಡು ಗಂಟೆಗಳ ಕಾಲ ಪರದಾಟ ನಡೆಸಬೇಕಾಯಿತು.

ಹಣವನ್ನು ಆಮೇಲೆ ಕೊಡುವುದಾಗಿ ಕೇಳಿಕೊಂಡರೂ ಒಪ್ಪದ ಚಾಲಕ ದುಡ್ಡು ಹೊಂದಿಸಿಕೊಳ್ಳಿ, ಆಮೇಲೆ ಹೋಗೋಣ ಎಂದು ಹೇಳಿ ಹೋಗಿದ್ದ. ಮೃತನ ಸಂಬಂಧಿಕರು ಕೂಡ ಹಣ ಹೊಂದಿಸುವುದಕ್ಕಾಗಿ ಹರಸಾಹಸ ಪಟ್ಟ ಪರಿಸ್ಥಿತಿ ಮನಕಲಕುವಂತೆ ಇತ್ತು. ಇಂತಹ ಸ್ಥಿತಿಯಲ್ಲಿ ಶವವನ್ನು ಚಿತಾಗಾರಕ್ಕೆ ಸಾಗಿಸಲು ವಾಹನ ವ್ಯವಸ್ಥೆ ಮಾಡದ ಜಿಲ್ಲಾಡಳಿತದ ವಿರುದ್ಧವೂ ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ನಂತರ ವಿಷಯ ತಿಳಿದ ಆನಗೋಡು ಜಿ.ಪಂ ಕ್ಷೇತ್ರದ ಸದಸ್ಯ ಕೆ.ಎಸ್. ಬಸವಂತಪ್ಪ ಅವರು ನಗರ ಪಾಲಿಕೆ ಅಧಿಕಾರಿಗಳ ಮನವೊಲಿಸಿ ಮುಕ್ತಿ ವಾಹಿನಿ ವಾಹನ ಒದಗಿಸಿಕೊಡುವಂತೆ ಮನವಿ ಮಾಡಿದರು. ಮುಕ್ತಿ ವಾಹಿನಿ ಬಂದ ಬಳಿಕ ಖಾಸಗಿ ಆಂಬ್ಯುಲೆನ್ಸ್ ನಿಂದ ಶವವನ್ನು ಮುಕ್ತಿ ವಾಹಿನಿಗೆ ಹಾಕಿಕೊಂಡು ಚಿತಾಗಾರಕ್ಕೆ ತೆಗೆದುಕೊಂಡು ಹೋಗಲಾಯಿತು.

## 6 ಸಾವು, 438 ಪಾಸಿಟಿವ್

(1ನೇ ಪುಟದಿಂದ) ಯಲ್ಲಮ್ಮ ನಗರದ 55 ವರ್ಷದ ಪುರುಷ, ಎಸ್.ಎಸ್. ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಎಂ.ಸಿ.ಸಿ. ಬಿ ಬ್ಲಾಕ್‌ನ 80 ವರ್ಷದ ಪುರುಷ, ಶಕ್ತಿ ನಗರದ 61 ವರ್ಷದ ಪುರುಷ, ಹೊನ್ನಾಳಿ ತಾಲ್ಲೂಕು ಮರಿಗೊಂಡನಹಳ್ಳಿಯ 70 ವರ್ಷದ ಪುರುಷ ಹಾಗೂ ಬಾಪೂಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 58 ವರ್ಷದ ಮಹಿಳೆ ಮೃತಪಟ್ಟಿದ್ದಾರೆ.

## ಭತ್ತ ಖರೀದಿಗೆ ನೋಂದಣಿ

(1ನೇ ಪುಟದಿಂದ) ರಾಬಿ ಋತುವಿನ 12 ಸಾವಿರ ಮೆಟ್ರಿಕ್ ಟನ್ ಭತ್ತವನ್ನು 2020-21 ನೇ ಸಾಲಿನ ಮುಂಗಾರು ಋತುವಿನಲ್ಲಿ ಖರೀದಿಸಲು ಅನುಮತಿಯನ್ನು ನೀಡಿದೆ. ಅದರಂತೆ ಭತ್ತ ಖರೀದಿಗೆ ಸಂಬಂಧಿಸಿದಂತೆ ರೈತರು ನೋಂದಣಿ ಮಾಡಿಸಲು ಮೇ 5 ಅಂತಿಮ ದಿನವಾಗಿರುತ್ತದೆ. ಪ್ರತಿ ರೈತರಿಂದ ಪ್ರತಿ ಎಕರೆಗೆ 16 ಕ್ವಿಂಟಾಲ್‌ನಂತೆ ಗರಿಷ್ಟ 40 ಕ್ವಿಂಟಾಲ್ ಭತ್ತವನ್ನು ತಕ್ಷಣದಿಂದ ಜಾರಿಗೆ ಬರುವಂತೆ ದಿ. 30-06-2021 ರವರೆಗೆ ಖರೀದಿಸಲು ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

## ಸಚಿವರು ಜನರ ಸಂಪರ್ಕದಲ್ಲಿರಬೇಕು

(1ನೇ ಪುಟದಿಂದ) ತಿಳಿಸಲಾಗಿದೆ. ಕೊರೊನಾ ಎರಡನೇ ಅಲೆ ಕುರಿತು ಚರ್ಚಿಸಲು ಆನ್‌ಲೈನ್ ಮೂಲಕ ಸಭೆ ಕರೆಯಲಾಗಿತ್ತು. ಕೊರೊನಾದಿಂದ ಶತಮಾನದ ಬಿಕ್ಕಟ್ಟು ಎದುರಾಗಿದೆ ಹಾಗೂ ಇದರಿಂದ ವಿಶ್ವಕ್ಕೆ ದೊಡ್ಡ ಸವಾಲಿದೆ ಎಂದು ಪ್ರಧಾನಿ ಹೇಳಿದ್ದಾರೆ. ಆಸ್ಪತ್ರೆಗಳ ಬೆಡ್‌ಗಳ ಸಂಖ್ಯೆ, ಆಕ್ಸಿಜನ್ ಸೌಲಭ್ಯ ಹಾಗೂ ಆಕ್ಸಿಜನ್ ಲಭ್ಯತೆ, ಅಗತ್ಯ ಔಷಧ ಸೇರಿದಂತೆ ಹಲವಾರು ವಿಷಯಗಳ ಮಾಹಿತಿಯನ್ನು ಮಂತ್ರಿಮಂಡಲಕ್ಕೆ ನೀಡಲಾಯಿತು.

## ವಾಹನ ತೆರಿಗೆ : ಅವಧಿ ವಿಸ್ತರಣೆ

(1ನೇ ಪುಟದಿಂದ) ಎಂದು ಸಾರಿಗೆ ಇಲಾಖೆ ಹೊಣೆ ಹೊತ್ತ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ತಿಳಿಸಿದ್ದಾರೆ. 12.04.2021ರ ಅನ್ವಯ ಪಾವತಿಸಬೇಕಾಗಿರುವ ಮೋಟಾರು ವಾಹನ ತೆರಿಗೆಯನ್ನು ದಂಡ ರಹಿತವಾಗಿ ಪಾವತಿಸಲು ಪಾವತಿಸಲು ಮೇ 31, 2021 ರವರೆಗೆ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿದೆ.

## ಲಾಕ್ ಡೌನ್ : ಸಮಯ ನೀಡಲು ಮನವಿ



ದಾವಣಗೆರೆ, ಏ.30 - ಲಾಕ್‌ಡೌನ್ ನಿಯಮದ ಪ್ರಕಾರ ರೈತ ಬಾಂಧವರಿಗೆ ಬೆಳಿಗ್ಗೆ 6 ರಿಂದ 10 ಗಂಟೆವರೆಗೆ ಸಮಯ ನಿಗದಿ ಮಾಡಿರುವುದರಿಂದ ಶೇಂಗಾ, ಮೆಕ್ಕೆಜೋಳ, ತರಕಾರಿಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆಗೆ ತಂದ ನಂತರ ಟೆಂಡರ್ ಪ್ರಕ್ರಿಯೆಗೆ ಸಮಯಾವಕಾಶ ಕಡಿಮೆಯಾಗುತ್ತಿದೆ ಮತ್ತು ರೈತರು ಕೃಷಿ ಪರಿಕರಗಳನ್ನು ಖರೀದಿಸಲು ಸಹ ಬಹಳಷ್ಟು ತೊಂದರೆಯಾಗುತ್ತಿದ್ದು, ಅಲ್ಲದೇ ಗಡಿಭಾಗದ ಚೆಕ್ ಪೋಸ್ಟ್ ಗಳಲ್ಲಿ ತೊಂದರೆ ಆಗುತ್ತಿರುವುದನ್ನು ಮನಗಂಡು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಬೆಳಿಗ್ಗೆ 6 ರಿಂದ ಮಧ್ಯಾಹ್ನ 3 ಗಂಟೆ ವರೆಗೂ ಸಮಯವಕಾಶ ನೀಡಲು ಮತ್ತು ಗಡಿಭಾಗದಲ್ಲಿ ರೈತಬಾಂಧವರಿಗೆ ಆಗುತ್ತಿರುವ ತೊಂದರೆಗಳನ್ನು ಸರಿಪಡಿಸುವಂತೆ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್ ಮನವಿ ಸಲ್ಲಿಸಿದ್ದಾರೆ.

## ಮಾನ್ಯ ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ ಇವರ ಸನ್ನಿಧಾನದಲ್ಲಿ

**ಪಿ.ಅಂಡ್.ಎಸ್.ಸಿ.ನಂ. 7/2021**

ಅರ್ಜಿದಾರರು : 1) ಕೃಷ್ಣ ಜಿ.ಕೆ. ತಂದೆ ಲೇಟ್ ಕೊಟ್ರೇಶಪ್ಪ ಎಂ., ವಯಸ್ಸು ಸುಮಾರು 38 ವರ್ಷ, ವಾಸ : # 1614/3, 11ನೇ ಕ್ರಾಸ್, ಕೆ.ಟಿ.ಜೆ. ನಗರ, ದಾವಣಗೆರೆ. 2) ಶ್ರೀಮತಿ ಶೋಭ ಕೋಂ ಸತೀಶ, ವಯಸ್ಸು ಸುಮಾರು 42 ವರ್ಷ, ವಾಸ : ಎನ್.ಹೆಚ್. 13 ರೋಡ್, ಚನ್ನಗಿರಿ, ದಾವಣಗೆರೆ ಜಿಲ್ಲೆ. 3) ಶ್ರೀಮತಿ ಶಾರದಮ್ಮ ಕೋಂ. ಕೊಟೋಜಿರಾವ್, ವಯಸ್ಸು ಸುಮಾರು 41 ವರ್ಷ, ವಾಸ : ಖಣದಸಾಲು ಬಡಾವಣೆ, ಚನ್ನಗಿರಿ, ದಾವಣಗೆರೆ ಜಿಲ್ಲೆ. 4) ಶ್ರೀಮತಿ ಉಷಾ ಕೆ. ಕೋಂ ಬಾಬುರಾವ್, ವಯಸ್ಸು ಸುಮಾರು 39 ವರ್ಷ, ವಾಸ : # 275, 1ನೇ ಮುಖ್ಯ ರಸ್ತೆ, 11ನೇ ಬಿ ಅಡ್ಡ ರಸ್ತೆ, ನಂದಗೋಕುಲ ಸ್ಕೂಲ್ ಹತ್ತಿರ, ಕಾವೇರಿಪುರ ಕಾಮಾಕ್ಷಿಪಾಳ್ಯ, ಬೆಂಗಳೂರು ಉತ್ತರ, ಬೆಂಗಳೂರು-560079. 5) ಶ್ರೀಮತಿ ಜ್ಯೋತಿ ಕೆ. ಕೋಂ ಕೃಷ್ಣೋಜಿರಾವ್, ವಯಸ್ಸು ಸುಮಾರು 38 ವರ್ಷ, ವಾಸ : ಕರಿಯಮ್ಮ ದೇವಿ ದೇವಸ್ಥಾನ ರಸ್ತೆ, ಕಂಡಿಕೆರೆ, ತುಮಕೂರು. - ವಿರುದ್ಧ- ಎದುರುದಾರರು : ಯಾರೂ ಇಲ್ಲ

**ಸಾರ್ವಜನಿಕ ಪ್ರಕಟಣೆ**

ಮೇಲ್ಕಂಡ ಅರ್ಜಿದಾರರು ಮೇಲ್ಕಂಡ ಘನ ನ್ಯಾಯಾಲಯದ ಮುಂದೆ ಭಾರತೀಯ ಉತ್ತರಾಧಿಕಾರ ಅಧಿನಿಯಮದ ಕಲಂ 372ರ ಅಡಿಯಲ್ಲಿ ಉತ್ತರಾಧಿಕಾರತ್ವದ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿದ್ದು, ತಾವು ಮೃತ ಮಂಜುಳಾ ಕೋಂ ಕೊಟ್ರೇಶಪ್ಪ ರವರ ಉತ್ತರಾಧಿಕಾರಿಗಳೆಂದು ತಮಗೆ ಮಂಜುಳಾ ಕೋಂ ಕೊಟ್ರೇಶಪ್ಪರವರ ಮರಣಾ ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಬರಬೇಕಾದ ಸೌಲಭ್ಯಗಳನ್ನು ಪಡೆಯಲು ನಾವೇ ವಾರಸುದಾರರು ಅಂತ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಮಾನ್ಯ ನ್ಯಾಯಾಲಯವು ಸದರಿ ಪ್ರಕರಣವನ್ನು 17.06.2021 ದಿನಾಂಕಕ್ಕೆ ನಿಗದಿ ಪಡಿಸಿರುತ್ತದೆ. ಮೃತ ಮಂಜುಳಾ ಕೋಂ. ಕೊಟ್ರೇಶಪ್ಪ ಇವರಿಗೆ ಸಂಬಂಧಪಟ್ಟಂತೆ ಇತರೆ ಯಾರಾದರೂ ಉತ್ತರಾಧಿಕಾರಿಗಳು ಇದ್ದಲ್ಲಿ ಪ್ರಕರಣದ ದಿನಾಂಕದ 17.06.2021 ರಂದು ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ತಾವಾಗಲಿ ತಮ್ಮ ಪರ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ಅಹವಾಲು ಸಲ್ಲಿಸತಕ್ಕದ್ದು. ಆ ದಿನ ಯಾರೂ ಹಾಜರಾಗದಿದ್ದಲ್ಲಿ ಪ್ರಕರಣವನ್ನು ಏಕ ಪಕ್ಷೀಯವಾಗಿ ನಿರ್ಣಯಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರುಣಿಸಿ ನನ್ನ ದಸ್ಕತ್ತಿನೊಂದಿಗೆ ದಿನಾಂಕ : 27.4.2021 ರಂದು ನೀಡಲಾಗಿದೆ.

ಸಹಿ/- (ಸಾಕಮ್ಮ ಎನ್.ಎಸ್)
ಅರ್ಜಿದಾರರ ಪರ ವಕೀಲರು
ಹರಿಹರ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- (ಶಿರಸ್ತೇದಾರರು)
ಸಿವಿಲ್ ನ್ಯಾಯಾಧೀಶರವರ
ನ್ಯಾಯಾಲಯ (ಕಿ.ವಿ.), ದಾವಣಗೆರೆ.




## ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ರೈಲ್ವೇ ನಿಲ್ದಾಣ ಎದುರು, ಪಿ. ಬಿ. ರಸ್ತೆ, ದಾವಣಗೆರೆ – 577002,
PH: 08192-252899, 232008, FAX:08192-252899
Email: itstaff_ulb_davanagere@yahoo.com,
Web: http://www.davanagerecity.mrc.gov.in

ನಂ.ದಾಮಪಾ/ಆಶಾ/ಘ.ತಾ.ನಿ/ಸಿಆರ್/2021–22 ದಿ: 22/04/2021

**ಕರ್ನಾಟಕ ಘನತ್ಯಾಜ್ಯ ನಿರ್ವಹಣೆ ಉಪವಿಧಿಗಳು 2019ರ ನಿಯಮ 19(1)ರಡಿ ಬೃಹತ್ ತ್ಯಾಜ್ಯೋತ್ಪಾದಕರನ್ನು ಅಧಿಸೂಚಿಸುವ ಸಾರ್ವಜನಿಕ ನೋಟೀಸು**

ಸರ್ಕಾರವು ಅಧಿಸೂಚಿಸಿದ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2016, ಇದು ಬೃಹತ್ ಘನತ್ಯಾಜ್ಯೋತ್ಪಾದಕರು ಮತ್ತು ನಿರ್ದಿಷ್ಠ ಪಡಿಸಿದ ನೂತನ ನಿರ್ಮಾಣಗಳನ್ನು ಕೈಗೊಳ್ಳುವವರು ಕೆಲವು ಘನತ್ಯಾಜ್ಯ ನಿರ್ವಹಣಾ ಕರ್ತವ್ಯಗಳನ್ನು ತಾವೇ ನಿರ್ವಹಿಸಬೇಕೆಂದು ಕಡ್ಡಾಯಪಡಿಸುತ್ತದೆ. ಇತರ ಯಾವುದೇ ನಿಯಮದಲ್ಲಿ/ಉಪಬಂಧದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಸಹ ದಾವಣಗೆರೆ ಮಹಾನಗರಪಾಲಿಕೆಯು (i) ದಿನವೊಂದಕ್ಕೆ 100ಕೆಜಿ ಅಥವಾ ಅದಕ್ಕೂ ಹೆಚ್ಚಿನ ಘನತ್ಯಾಜ್ಯವನ್ನು ಉತ್ಪಾದಿಸುವಂತಹ ಉತ್ಪಾದಕರುಗಳು (ಎಲ್ಲಾ ತ್ಯಾಜ್ಯ ಮೂಲಗಳಿಂದ) ಅಥವಾ (ii) 5000 ಚದರ ಮೀಟರುಗಳು ಅಥವಾ ಅದಕ್ಕೂ ಹೆಚ್ಚಿನ ಪ್ರದೇಶವನ್ನು ಹೊಂದಿರುವಂತಹ ರಕ್ಷಿತ (ಗೇಟೆಡ್) ಸಮುದಾಯಗಳು, ಕಾರ್ಪೊರೇಟ್ ಆವರಣಗಳು, ತಂತ್ರಜ್ಞಾನ ಪಾರ್ಕ್‌ಗಳು ಮತ್ತು ಸಂಸ್ಥೆಗಳೆಂದು ಪರಿಭಾಷಿಸಲಾದ ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರು ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2016 ಮತ್ತು ಅದರನ್ವಯ ದಾವಣಗೆರೆ ಮಹಾನಗರಪಾಲಿಕೆಯು ಅಧಿಸೂಚಿಸಿದ ಉಪವಿಧಿಗಳ ಉಪಬಂಧಗಳ ಅನ್ವಯ ಜೈವಿಕವಾಗಿ ಕೊಳೆಯಬಹುದಾದ ತ್ಯಾಜ್ಯಗಳನ್ನು ಮೂಲದಲ್ಲಿಯೇ ಮತ್ತು ಆವರಣದೊಳಗೆ ಸಂಸ್ಕರಿಸುವ ಮತ್ತು ನಿರ್ವಹಿಸುವ ಮೂಲಕ 3 (ಮೂರು) ಪ್ರವರ್ಗ/ರೀತಿಯಲ್ಲಿ (ಕೊಳೆಯಬಹುದಾದ ಜೈವಿಕ ತ್ಯಾಜ್ಯಗಳು, ಕೊಳೆಯಲಾರದಂತಹ ಜೈವಿಕರಹಿತ ತ್ಯಾಜ್ಯಗಳು ಮತ್ತು ಗೃಹೋತ್ಪಾದಕ ಹಾನಿಕಾರಕ ತ್ಯಾಜ್ಯಗಳು) ಘನತ್ಯಾಜ್ಯವನ್ನು ಬೇರ್ಪಡಿಸುವುದನ್ನು ಒಳಗೊಂಡು, ಈ ನೋಟೀಸು ಜಾರಿಯಾದ ದಿನಾಂಕದಿಂದ 60 ದಿನಗಳಿಗಿಂತ ಹೆಚ್ಚಾಗದ ಅವಧಿಯೊಳಗೆ ಅನುಷ್ಠಾನಗೊಳಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತದೆ. (ಸವಿವರವಾದ ಸೂಚನೆಗಳು ಉಪವಿಧಿಗಳಲ್ಲಿ ಲಭ್ಯವಿರುತ್ತದೆ). ಬೃಹತ್ ತ್ಯಾಜ್ಯೋತ್ಪಾದಕರ ಪರಿಭಾಷೆಯಡಿಯಲ್ಲಿ ಬರುವಂತಹ ಎಲ್ಲಾ ತ್ಯಾಜ್ಯೋತ್ಪಾದಕರೂ ಸಹ ಅವರುಗಳು ನೋಟೀಸನ್ನು ಜಾರಿ ಮಾಡಿದ ಅವಧಿಯೊಳಗೆ, ಪ್ರತಿ ದಿನವೊಂದಕ್ಕೆ ಅವರುಗಳು ತಮ್ಮ ಆವರಣದಿಂದ 100 ಕೆಜಿಗಿಂತ ಕಡಿಮೆ ತ್ಯಾಜ್ಯವನ್ನು ಉತ್ಪಾದಿಸುತ್ತಿರುವವರೆಂದು ಸ್ವಯಂಘೋಷಣೆಯನ್ನು ಸಲ್ಲಿಸದ ಹೊರತು ಅವರನ್ನು ಅದೇ ರೀತಿಯಲ್ಲಿಯೇ ವರ್ಗೀಕರಿಸಲಾಗುವುದು.

ಅಂತಹ ಸ್ವಯಂಘೋಷಣೆಯು ಪರಿಶೀಲನೆಗೆ ಒಳಪಡತಕ್ಕದ್ದು ಮತ್ತು ಒಂದು ವೇಳೆ ಅದು ಸುಳ್ಳೆಂದು ಕಂಡುಬಂದರೆ ಅನ್ವಯವಾಗುವಂತಹ ದಂಡಕ್ಕೆ ಒಳಪಟ್ಟಿರತಕ್ಕದ್ದು. ಅಂತಹ ಸ್ವಯಂಘೋಷಣೆಯನ್ನು ಪರಿಶೀಲನೆ ಮಾಡುವ ಸಲುವಾಗಿ ನೋಟೀಸನ್ನು ಜಾರಿಗೊಳಿಸಿದ 20 ದಿವಸಗಳೊಳಗೆ ದಾವಣಗೆರೆ ಮಹಾನಗರಪಾಲಿಕೆಗೆ ಸಲ್ಲಿಸತಕ್ಕದ್ದು. ಈ ದಿನಾಂಕದ ನಂತರ ಕಳುಹಿಸಲಾಗುವ/ಸಲ್ಲಿಸಲಾಗುವ ಸ್ವಯಂಘೋಷಣೆಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು. ಈ ನೋಟೀಸನ್ನು ಜಾರಿಗೊಳಿಸಲಾದ 60 ದಿನಗಳ ನಂತರ ಬೃಹತ್ ತ್ಯಾಜ್ಯೋತ್ಪಾದಕರುಗಳು ಘನ ತ್ಯಾಜ್ಯ ನಿರ್ವಹಣೆ ನಿಯಮಗಳು, 2016 ಮತ್ತು/ಅಥವಾ ಈ ಉಪವಿಧಿಗಳನ್ನು ಉಲ್ಲಂಘಿಸಿದಲ್ಲಿ, ಅವರಿಗೆ ದಾವಣಗೆರೆ ಮಹಾನಗರಪಾಲಿಕೆಗಳ ಉಪವಿಧಿಗಳಡಿಯಲ್ಲಿ ನಮೂದಿಸಲಾದ ಅನ್ವಯುವಾಗಬಹುದಾದ ದಂಡದ ದರಗಳನ್ನು/ಜುಲ್ಮಾನೆಗಳನ್ನು ವಿಧಿಸಲಾಗುವುದು. ಆ ತರುವಾಯದ ದಿನಾಂಕದಲ್ಲಿ ಈ ಘೋಷಣೆಯು ಸುಳ್ಳೆಂದು ಕಂಡು ಬಂದಲ್ಲಿ, ಮಹಾನಗರ ಪಾಲಿಕೆಗಳ ಉಪವಿಧಿಗಳ ಅನುಸಾರ ದಂಡವನ್ನು ವಿಧಿಸಲಾಗುವುದು.

ವಾಸಾಇ/ದಾವಣಗೆರೆ/68/ಎಂಸಿಎ/2021–22

ಸಹಿ/– ಆಯುಕ್ತರು,
ಮಹಾನಗರ ಪಾಲಿಕೆ, ದಾವಣಗೆರೆ

## ಹರಪನಹಳ್ಳಿ : 3 ದಿನಗಳಲ್ಲಿ 116 ಕೋವಿಡ್ ಪ್ರಕರಣ ದೃಢ

ಹರಪನಹಳ್ಳಿ, ಏ.30- ಹರಪನಹಳ್ಳಿ ತಾಲ್ಲೂಕಿನಲ್ಲಿ ದಿನದಿಂದ ದಿನಕ್ಕೆ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಲಿದ್ದು, ಕಳೆದ 3 ದಿನಗಳಲ್ಲಿ ಒಟ್ಟು 116 ಕೋವಿಡ್ ಪ್ರಕರಣಗಳು ದೃಢ ಪಟ್ಟಿವೆ.

ಪಟ್ಟಣದ ಆಚಾರ್ ಬಡಾವಣೆ, ಪ್ರವಾಸಿ ಮಂದಿರ ವೃತ್ತ, ಶಿಕ್ಷಕರ ಕಾಲೋನಿ, ಕಾಶಿಮಠ ಪ್ರದೇಶಗಳಲ್ಲಿ ಹೆಚ್ಚು ಕಂಡು ಬಂದಿವೆ.

ತಾಲ್ಲೂಕಿನ ಅರಸಿಕೇರಿ, ಕೂಲಹಳ್ಳಿ, ದುಗ್ಗಾವತಿ, ಹಲುವಾಗಲು, ನೀಲಗುಂದ, ಯರಬಾಳು ಮುಂತಾದ ಗ್ರಾಮಗಳಲ್ಲಿ ಪ್ರಕರಣಗಳು ಹೆಚ್ಚು ಪತ್ತೆಯಾಗಿವೆ ಎಂದು ವೈದ್ಯಾಧಿಕಾರಿ ವೆಂಕಟೇಶ್ ತಿಳಿಸಿದ್ದಾರೆ.

## ಕೈಗಾರಿಕೆ ಶೇ.6.8ರ ಬೆಳವಣಿಗೆ

ನವದೆಹಲಿ,ಏ. 30- ಎಂಟು ಪ್ರಮುಖ ವಲಯಗಳು ಕಳೆದ ಮಾರ್ಚ್ ತಿಂಗಳಲ್ಲಿ ಶೇ.6.8ರ ಬೆಳವಣಿಗೆ ಕಂಡಿವೆ. ಇದು ಕಳೆದ 32 ತಿಂಗಳಲ್ಲೇ ಅತಿ ಹೆಚ್ಚಾಗಿದೆ.

ಕಳೆದ ವರ್ಷ ಬೆಳವಣಿಗೆ ದರ ಶೇ.8.6ರಷ್ಟು ಕುಸಿದಿತ್ತು. ಈ ಕಾರಣದಿಂದ ಪ್ರಸಕ್ತ ವರ್ಷದಲ್ಲಿ ಬೆಳವಣಿಗೆ ಗೋಚರವಾಗುತ್ತಿದೆ. ಈ ವರ್ಷ ನೈಸರ್ಗಿಕ ಅನಿಲ, ಉಕ್ಕು, ಸಿಮೆಂಟ್ ಹಾಗೂ ವಿದ್ಯುತ್ ಬಳಕೆ ಹೆಚ್ಚಾಗಿದೆ ಎಂದು ಅಧಿಕೃತ ಅಂಕಿ ಅಂಶಗಳು ತಿಳಿಸಿವೆ. ಕಳೆದ ವರ್ಷ ಲಾಕ್‌ಡೌನ್ ಕಾರಣದಿಂದಾಗಿ ಎಲ್ಲಾ ವಲಯಗಳು ಕುಸಿತ ಕಂಡಿದ್ದವು.

## ಲಸಿಕೆ ಬಂದ ತಕ್ಷಣ ಪೂರೈಕೆ : ಸಿಎಂ

ಬೆಂಗಳೂರು, ಏ. 30 – ಲಸಿಕೆ ಪೂರೈಕೆ ವಿಳಂಬವಾಗಿರುವ ಕಾರಣ 18 ವರ್ಷ ಮೇಲಿನವರಿಗೆ ನಾಳೆ ಶನಿವಾರದಿಂದ ಲಸಿಕೆ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಲಸಿಕೆ ಬಂದ ತಕ್ಷಣ ಪೂರೈಕೆ ಮಾಡಲಾಗುವುದು. ಇದರಲ್ಲಿ ವೈಫಲ್ಯದ ಪ್ರಶ್ನೆಯೇ ಬರುವುದಿಲ್ಲ ಎಂದಿದ್ದಾರೆ.

| ರಂಜಾನ್ ರೋಜಾ ಸಮಯ | |
|---|---|
| | ದಿನಾಂಕ : 01.5.2021, ಇಫ್ತೇಯಾರಿ ಸಮಯ : 6-48 |
| | ದಿನಾಂಕ 02.05.2021, ಸಹೇರಿ ಸಮಯ : 4-47 |

## ಮಲೇಬೆನ್ನೂರು : ನೆಲಕಚ್ಚಿದ ಭತ್ತದ ಬೆಳೆ



ಮಲೇಬೆನ್ನೂರು, ಏ.30- ಗುರುವಾರ ರಾತ್ರಿ ಬೀಸಿದ ಬಿರುಗಾಳಿ-ಮಳೆಗೆ ಮಲೇಬೆನ್ನೂರು ಹೋಬಳಿಯಲ್ಲಿ 744 ಎಕರೆ ಭತ್ತದ ಬೆಳೆ ನೆಲಕಚ್ಚಿದೆ ಎಂದು ಉಪ ತಹಶೀಲ್ದಾರ್ ಆರ್. ರವಿ ಮಾಹಿತಿ ನೀಡಿದ್ದಾರೆ.

ಆದಾಪುರ, ನಿಟ್ಟೂರು ಮತ್ತು ಕುಂಬಳೂರಿನಲ್ಲಿ ನೆಲಕಚ್ಚಿದ ಭತ್ತದ ಬೆಳೆ ವೀಕ್ಷಿಸಿದ ರವಿ ಅವರು, ಬೆಳೆ ಹಾನಿ ಕುರಿತು ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಎಲ್ಲಾ ಗ್ರಾಮಲೆಕ್ಕಾಧಿಕಾರಿಗಳಿಗೆ ಸೂಚಿಸಿದ್ದೇವೆ ಎಂದರು. ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಶ್ರೀಧರಮೂರ್ತಿ ಈ ವೇಳೆ ಹಾಜರಿದ್ದರು.

ಗ್ರಾಮ ಲೆಕ್ಕಾಧಿಕಾರಿಗಳಾದ ಜಿಗಳಿ ವೃತ್ತದ ಸುಭಾನಿ, ಕೊಕ್ಕನೂರು ವೃತ್ತದ ಬೋರಯ್ಯ, ಧೂಳೆಹೊಳೆ ವೃತ್ತದ ಮಂಜುಳಾ, ವಾಸನ ವೃತ್ತದ ಆನಂದತೀರ್ಥ, ಕುಂಬಳೂರು ವೃತ್ತದ ಶ್ರೀಧರ ಮೂರ್ತಿ ಅವರುಗಳು ನೀಡಿರುವ ಸದ್ಯದ ಮಾಹಿತಿ ಪ್ರಕಾರ ನಂದಿಗುಡಿಯಲ್ಲಿ 50, ಗೋವಿನಹಾಳ್-14, ಕಂಭತ್ತಹಳ್ಳಿ-ಕೊಕ್ಕನೂರು ಸೇರಿ-15, ಕುಂಬಳೂರು-55, ನಿಟ್ಟೂರು-45, ಆದಾಪುರ-80, ಯಲವಟ್ಟಿ-45, ಜಿಗಳಿ-50, ಜಿ. ಬೇವಿನಹಳ್ಳಿ-40 ಮತ್ತು ಧೂಳೆಹೊಳೆ-ಇಂಗಳಗೊಂದಿಯಲ್ಲಿ 350 ಎಕರೆ ಸೇರಿ ಒಟ್ಟು 744 ಎಕರೆ ಭತ್ತದ ಬೆಳೆ ನೆಲಕಚ್ಚಿದೆ.

**ಹಾನಿಯಾಗಿಲ್ಲ:** ಬಿರುಗಾಳಿ ಮಳೆಗೆ ನೆಲಕಚ್ಚಿರುವ ಭತ್ತದ ಬೆಳೆ 2-3 ದಿನಗಳಲ್ಲಿ ಮೇಲಕ್ಕೆ ಎದ್ದೇಳಲಿದೆ. ಹಾಗಾಗಿ ಇದನ್ನು ಹಾನಿ ಎಂದು ಪರಿಗಣಿಸಲು ಆಗುವುದಿಲ್ಲ ಎಂದು ಸಹಾಯಕ ಕೃಷಿ ನಿರ್ದೇಶಕ ಗೋವರ್ಧನ್ ಅವರು 'ಜನತಾವಾಣಿ' ಗೆ ತಿಳಿಸಿದ್ದಾರೆ.

ಒಂದು ವೇಳೆ ಶುಕ್ರವಾರ ಅಥವಾ ಶನಿವಾರ ಮತ್ತೆ ಮಳೆ ಬಂದರೆ ಈಗ ನೆಲಕಚ್ಚಿರುವ ಕಟಾವಿಗೆ ಬಂದಿರುವ ಭತ್ತಕ್ಕೆ ಹಾನಿ ಆಗಲಿದೆ. ಮಳೆ ಬಾರದಿದ್ದರೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

## ಮುಂಬೈನಲ್ಲಿ ಕೊರೊನಾ ಪಾಸಿಟಿವ್ ದರ ಒಂದಂಕಿಗೆ ಇಳಿಕೆ

ಮುಂಬೈ, ಏ. 30 – ದೇಶದ ಆರ್ಥಿಕ ರಾಜಧಾನಿಯಾದ ಮುಂಬೈನಲ್ಲಿ ಕೊರೊನಾ ಪಾಸಿಟಿವಿಟಿ ದರ ಶೇ.10ಕ್ಕೂ ಕೆಳ ಹಂತಕ್ಕೆ ತಲುಪಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ಇಕ್ಬಾಲ್ ಸಿಂಗ್ ಚಹಲ್ ತಿಳಿಸಿದ್ದಾರೆ.

ಏಪ್ರಿಲ್ 29ರಂದು ಪಾಸಿಟಿವಿಟಿ ದರ ಶೇ.9.94ರಷ್ಟಿದೆ. ಅಂದು 4,328 ಸೋಂಕಿತರು ಕಂಡು ಬಂದಿದ್ದಾರೆ. ಈ ದಿನ 43,525 ಸೋಂಕಿತರನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು.

ಅತಿ ಹೆಚ್ಚಿನ ಪರೀಕ್ಷೆಗಳನ್ನು ನಡೆಸಿದ ನಂತರವೂ ಪಾಸಿಟಿವಿಟಿ ದರ ಒಂದಂಕಿಗೆ ಇರುವ ಏಕೈಕ ನಗರ ಮುಂಬೈ ಎಂದು ಚಹಲ್ ತಿಳಿಸಿದ್ದಾರೆ.

ಶೇ.85ರಷ್ಟು ಸೋಂಕಿತರು ಲಕ್ಷಣ ರಹಿತರಾಗಿದ್ದಾರೆ. ಶುಕ್ರವಾರ ಮಧ್ಯಾಹ್ನ ನಗರದ ಆಸ್ಪತ್ರೆಗಳಲ್ಲಿ ಖಾಲಿ ಇರುವ ಬೆಡ್‌ಗಳ ಸಂಖ್ಯೆ 5,725ಕ್ಕೆ ತಲುಪಿದೆ. ಹೊಸದಾಗಿ ಸೋಂಕಿತರು ದಾಖಲಾಗುವ ಪ್ರಮಾಣ ಕಡಿಮೆಯಾಗಿದೆ ಎಂದವರು ತಿಳಿಸಿದ್ದಾರೆ.


### ರಾಗಿಮಸಲವಾಡದ ಬುಳ್ಳಾಪುರದ ಸಿದ್ಧಪ್ಪ ನಿಧನ



ವಿಜಯನಗರ ಜಿಲ್ಲೆ, ಹರಪಹಳ್ಳಿ ತಾಲ್ಲೂಕು, ರಾಗಿಮಸಲವಾಡ ಗ್ರಾಮದ ವಾಸಿ

**ಬುಳ್ಳಾಪುರದ ಸಿದ್ದಪ್ಪ**

ಅವರು 30.04.2021 ರ ಶುಕ್ರವಾರ ಸಂಜೆ 4 ಗಂಟೆಗೆ ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿ. 1.05.2021 ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ರಾಗಿಮಸಲವಾಡದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ :

**ಬುಳ್ಳಾಪುರ ವಂಶಸ್ಥರು, ರಾಗಿಮಸಲವಾಡ**



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

### ಗುರು ಲಿಂಗ ಜಂಗಮಾರಾಧನೆ



ಪಿ.ಜೆ. ಬಡಾವಣೆ, 4ನೇ ಮೇನ್ 9ನೇ ಕ್ರಾಸ್ ದಾವಣಗೆರೆ ವಾಸಿ

**ವೀರಣ್ಣ ಹನಗೋಡಿಮಠ ಮತ್ತು ಸಹೋದರರು**

ಮಾಡುವ ವಿಜ್ಞಾಪನೆಗಳು.

ದಿನಾಂಕ : 27.04.2021ರ ಮಂಗಳವಾರ ಬೆಳಿಗ್ಗೆ 11.30ಕ್ಕೆ ನಮ್ಮ ತಂದೆಯವರಾದ

**ಶ್ರೀ ಸಿದ್ಧರಾಮಯ್ಯ ಹನಗೋಡಿಮಠ**

ಇವರು ಲಿಂಗೈಕ್ಯರಾದ ಪ್ರಯುಕ್ತ ಇವರ ಆತ್ಮಶಾಂತಿಗಾಗಿ

'ಗುರು ಲಿಂಗ ಜಂಗಮಾರಾಧನೆ' ಸಲುವಾಗಿ

ದಿನಾಂಕ : 01.05.2021ನೇ ಶನಿವಾರ ಕೋವಿಡ್ ಇರುವುದರಿಂದ ಈ ಕೆಳಕಂಡ ಸ್ಥಳದಲ್ಲಿ

✳ ರಂಭಾಪುರಿ ಪೀಠ, ಬಾಳೆಹೊನ್ನೂರು ✳ ಹಿರಿಯ ವನಿತೆಯರ ಆನಂದಧಾಮ ✳ ಶುಭೋದಯ ಸ್ವಧಾರ್ ಗೃಹ ✳ ಜ್ಯೋತಿ ಸೇವಾ ಕೇಂದ್ರ (Old Age Home)

ಪ್ರಸಾದ ದಾಸೋಹವನ್ನು ನಡೆಸಬೇಕೆಂದು ತೀರ್ಮಾನಿಸಿದ್ದೇವೆ.

ಇಂತಿ ದುಃಖತಪ್ತರು :

❖ ಹೆಚ್.ಎಸ್. ಮುರುಗೇಶ್ ❖ ಹೆಚ್.ಎಸ್. ಸಂಗಮೇಶ್ ❖ ಹೆಚ್.ಎಸ್. ವಾಗೀಶ್

ಸೊಸೆಯಂದಿರು : ❖ ಮಂಜುಳಾ ❖ ಕಾಂತಶ್ರೀ ❖ ಆಶಾ ಮೊಮ್ಮಕ್ಕಳು : ❖ ಅನ್‌ಮೋಲ್ ❖ ಸಮರ್ಥ ❖ ಮನೋಜ್ ❖ ಧನ್ಯತಾ ಪ್ರೇಮ ❖ ಧೀರಜ್ ಹನಗೋಡಿ ಮಠ, ದಾವಣಗೆರೆ.

ಫೋನ್ : 94485 34461, 94813 63332



### ಶುಭ ವಿವಾಹ



ಆತ್ಮೀಯ ಬಂಧು-ಮಿತ್ರರೇ...

ನಮ್ಮ ಪುತ್ರಿ

**ಚಿ॥ಕುಂ॥ಸೌ॥ ಚಿತ್ರಕಲಾ ಹೆಚ್.ಎಂ.** B.E.,

**ಚಿ॥ರಾ॥ ಶ್ರೀಗಂಧ ಹೆಚ್.ಎಸ್.** B.E.,

(ಶ್ರೀಮತಿ ಆಶಾ ಮತ್ತು ಶ್ರೀ ಸತೀಶ್ ಎಸ್. ಹಿರೇಮಠ, ಬೆಂಗಳೂರು ಇವರ ಸುಪುತ್ರ)

ಇವರ ವಿವಾಹ ಮಹೋತ್ಸವದ 'ಆರತಕ್ಷತೆ ಕಾರ್ಯಕ್ರಮ'ವನ್ನು ದಿನಾಂಕ 02.04.2021ರ ಭಾನುವಾರ ಮತ್ತು 'ವಿವಾಹ ಮುಹೂರ್ತ'ವನ್ನು ದಿನಾಂಕ 03.04.2021ರ ಸೋಮವಾರ ಎಸ್.ಎಸ್. ಕನ್‌ವೆನ್‌ಷನ್ ಹಾಲ್, ದಾವಣಗೆರೆ ಇಲ್ಲಿ ನಡೆಸಲು ನಿಶ್ಚಯಿಸಲಾಗಿತ್ತು. ಆದರೆ, ಕೊರೊನಾ ಸೋಂಕಿನ ಹರಡುವಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ 50 ಜನರ ಪರಿಮಿತಿಯೊಳಗೆ ನಡೆಸಬೇಕಿದೆ.

ಆದ ಕಾರಣ, ವಿವಾಹ ಮಹೋತ್ಸವವನ್ನು ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ ಇಲ್ಲಿರುವ ನಮ್ಮ ಸ್ವಗೃಹದಲ್ಲಿಯೇ ದಿನಾಂಕ 03.04.2021ರಂದು ಸರಳವಾಗಿ ವಧು-ವರರ ಕುಟುಂಬದವರ ಸಮ್ಮುಖದಲ್ಲಿ ನೆರವೇರಿಸಲು ನಿಶ್ಚಯಿಸಿದ್ದೇವೆ. ಬಂಧು-ಮಿತ್ರರು ತಾವುಗಳು ಇದ್ದಲ್ಲಿಯೇ ವಧು-ವರರಿಗೆ ಶುಭ ಹಾರೈಸಬೇಕಾಗಿ ಈ ಮೂಲಕ ಕೋರುತ್ತೇವೆ.

ತಮ್ಮ ವಿಶ್ವಾಸಿಗಳು,

**ಶ್ರೀಮತಿ ಹೆಚ್.ಎಂ. ಜ್ಯೋತಿ ಮತ್ತು ಹೆಚ್.ವಿ. ಮಂಜುನಾಥ ಸ್ವಾಮಿ ಹೊಸಮಠ**



ಕಲಾ ಕನ್‌ಸ್ಟ್ರಕ್ಷನ್

ಸಿವಿಲ್ ಇಂಜಿನಿಯರ್ ಅಂಡ್ ಬಿಲ್ಡರ್

#19, ನ್ಯಾಷನಲ್ ಕಾನ್ವೆಂಟ್ ಹತ್ತಿರ, ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ. ಮೊ. : 9844882366







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte